ಹಿಮ ಹನಿ

ಮತ್ತು

ಇತರ ಕಥೆಗಳು

❋

ಮಾಣಿಪ್ಪಾಡಿ ಕೇಶವ ಭಟ್ಟ, ಬಿ. ಎ.

❋

ಂತಿಕ ಸಮಾಜ, ಇಂಡಿಯ
ಕೇರಳ.

ಬೆಲೆ: 50 ನಯೇ ಪೈಸೆ.

ಹಿಮ ಹನಿ

ಮತ್ತು

ಇತರ ಕಥೆಗಳು

*

ಮಾಣಿಪ್ಪಾಡಿ ಕೇಶವ ಭಟ್ಟ, ಬಿ. ಎ.

1959

ವೇದಾಂತಿಕ ಸಮಾಜ, ಇಂಡಿಯ
ಕೇರಳ.

*

೧೯೫೯

*

ಮುದ್ರಕರು:

ವಿಜಯ ಮುದ್ರಣಾಲಯ,

ಮಂಗಳೂರು.

ಮೊದಲ ಮಾತು

ಇದು ಇಂಗ್ಲೀಷಿನಿಂದ ಆರಿಸಿದ ಹತ್ತು ಕತೆಗಳ ಸಂಗ್ರಹ. ಈ ಕತೆಗಳು ಕಿರಿಯರಿಗಲ್ಲದೆ ಇತರ ಓದುಗರಿಗೂ ರುಚಿಸಬಹುದಾದುವುಗಳು. ಈ ಕತೆಗಳ ಎರಡನೇ ಕುಸುಮವನ್ನು ಚಂದವಾಗಿ, ಶುಚಿಯಾಗಿ ಮುದ್ರಿಸಿದ ವಿಜಯ ಮುದ್ರಣದ ವ್ಯವಸ್ಥಾಪಕರಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

ಇತಿ,

ಬಾಯಾರು, ಕೇರಳ
೧೦–೨–೧೯೫೯.

ಯಂ. ಕೇಶವ ಭಟ್ಟ.

ಅನುಕ್ರಮಣಿಕೆ

			ಪುಟ
೧.	ಹಿಮ ಹನಿ	... ...	1
೨.	ಕೃತಜ್ಞತೆಯುಳ್ಳ ಪ್ರಾಣಿಗಳು	...	8
೩.	ಉತ್ಸಾಹಿ ಸಂಗೀತಗಾರ	... ...	13
೪.	ರಾಣಿಜೇನು ನೊಣ	... ...	16
೫.	ನಾಲ್ವರು ಸಹೋದರರು	... ...	19
೬.	ನಾಯಿ ಮತ್ತು ಗುಬ್ಬಚ್ಚಿ	... ...	26
೭.	ಚಂದ್ರಗುಪ್ತ ಮತ್ತು ಮನೋರಮೆಯರ ಅದ್ಭುತ ಕೃತ್ಯ	...	30
೮.	ಅದೃಷ್ಟಶಾಲಿ ಮೂವರು ಮಕ್ಕಳು	...	35
೯.	ಚೆನ್ನ ಮತ್ತು ಸುಬ್ಬಿ	... ...	38
೧೦.	ಪಿಶಾಚಿಗಳು ಮತ್ತು ಸಮಗಾರ	...	43

೧. ಹಿಮ ಹನಿ

ಚಳಿಗಾಲದ ಮಧ್ಯದ ಸಮಯ ಹೊರಗೆ ಹಿಮದ ಗಡ್ಡೆಗಳು ಬೀಳು ತ್ತಿದ್ದುವು. ಒಬ್ಬಳು ರಾಣಿ ಕಿಟಿಕಿಯ ಬಳಿ ಕುಳಿತು ಕಿಟಿಕಿಯಿಂದ ಹೊರಗೆ ಹಿಮುವನ್ನು ನೋಡುತ್ತ ತನ್ನ ಬೆರಳಿಗೆ ಚುಚ್ಚಲು, ಮೂರು ಹನಿ ರಕ್ತ ಹೊರಗೆ ಹಿಮದ ಮೇಲೆ ಬಿತ್ತು. ಹಿಮದ ಮೇಲೆ ಬಿದ್ದ ರಕ್ತದ ಹನಿಗಳನ್ನು ನೋಡುತ್ತ, "ನನ್ನ ಮಗಳು ಹಿಮದಂತೆ ಬಿಳುಪಾಗಿಯೂ, ರಕ್ತ ಕೆಂಪಗಾಗಿಯೂ, ಕಿಟಿಕಿಯ ಗುಂಟದ ಕರಿಮರದಂತೆ ಕಪ್ಪಗಾಗಿಯೂ ಆಗುವಳೆ!" ಎಂದಳು. ಹೀಗೆ ಅವಳ ಮಗಳು ಬೆಳೆಯಲು ಅವಳ ಮೈಯು ಬೆಳ್ಳಗಾಗಿ, ಕೆನ್ನೆಗಳು ಕೆಂಪಗಾಗಿ, ತಲೆಕೂದಲೂ ಕರಿಮರದಂತೆ ಕಪ್ಪಾಗಿ ಅವಳನ್ನು ಹಿಮಹನಿಯೆಂದು ಕರೆಯಲಾಯಿತು.

ಈ ರಾಣಿಯು ತೀರಿ ಹೋಗಲು ರಾಜನು ಇನ್ನೊಂದು ಮದುವೆಯಾದನು. ಅವಳು ಬಹಳ ಚೆಲುವೆಯಾಗಿದ್ದಳು. ಅವಳೊಡನೆ ಒಂದು ಮಾಯದ ಕನ್ನಡಿಯಿತ್ತು. ಆ ಕನ್ನಡಿ ನೋಡಿ, ಕನ್ನಡಿಯೊಡನೆ, "ಇಡೀ ಲೋಕದಲ್ಲಿ ಬಿಳುಪಾಗಿರುವವಳು ಯಾರು?" ಎಂದು ಕೇಳಿದಳು. ದಿನ ಹೋದಂತೆ ಹಿಮಹನಿಯು ಬೆಳೆಯುತ್ತಾ ಏಳು ವರ್ಷ ತುಂಬಲು ಹಗಲು ಹೊತ್ತಿಗಿಂತ ಶುಭ್ರಳೂ, ಎರಡನೆಯ ರಾಣಿಗಿಂತ ಹೆಚ್ಚು ಬಿಳುಪಾಗಿಯೂ ಕಂಡಳು. ಆಗ ಒಂದು ದಿನ ಎಂದಿನಂತೆ ರಾಣಿಯು ಕನ್ನಡಿಯೊಡನೆ ಕೇಳಲು, "ನೀನು ಬಿಳುಪಾಗಿಯೂ ಚಂದವಾಗಿಯೂ ಇರಬಹುದು. ಆದರೆ ಹಿಮಹನಿಯು ನಿನಗಿಂತಲೂ ಪ್ರಿಯಳಾಗಿರುವಳು," ಎಂದಿತು ಕನ್ನಡಿ. ಇದನ್ನು ಕೇಳಲು ರಾಣಿಯು ಸಪ್ಪಗಾಗಿ ಬಹಳವಾಗಿ ಕೋಪಗೊಂಡು ವಿರೋಧಿಸಲು ಹವಣಿಸಿದಳು. ಒಬ್ಬ ಸೇವಕನನ್ನು ಕರೆದು, "ಅವಳನ್ನು ಗುಡ್ಡ ಕಾಡಿಗೆ ಕೊಂಡೊಯ್ದು ಇನ್ನು ಮುಂದೆ ನನ್ನ ಕಣ್ಣಿಗೆ ಕಾಣಿಸದಂತೆ ಮಾಡು," ಎಂದಳು. ಸೇವಕನು ಅವಳನ್ನು ದೂರಕ್ಕೆ ಕೊಂಡೊಯ್ದನು. ಹಿಮಹನಿಯು ತನ್ನನ್ನು ಕೊಲ್ಲದಿರು ಎಂದು ಬೇಡಿಕೊಳ್ಳಲು ಅವನು ಕನಿಕರಪಟ್ಟು ಕೊಲ್ಲಲು ಮನಸ್ಸಿಲ್ಲದೆ ತನ್ನ ಬಳಿಯಲ್ಲಿ ಇರಿಸಿದನು. ಅವಳನ್ನು ಕೊಲ್ಲದೆ ತನ್ನ ಹೃದಯದಲ್ಲಿ ಒಂದು ದೊಡ್ಡ ಭಾರವನ್ನು ಕಡಿಮೆ ಮಾಡಿದಂತಾಯಿತು—ಎಂದು ಭಾವಿಸಿ ಅವಳನ್ನು ಅವಳಷ್ಟಕ್ಕೇ ಬಿಡಲು ಹವಣಿಸಿದನು.

ಬಡ ಹಿಮಹನಿ ಗುಡ್ಡ ಕಾಡಿನಲ್ಲಿ ನಡೆಯುತ್ತಾ ಬಳಲಿದಳು. ಕಾಡಿನಲ್ಲಿದ್ದ ಪ್ರಾಣಿಗಳು ಅವಳನ್ನು ನೋಡಿ ಘರ್ಜಿಸಿದುವು ಮತ್ತು ಅವಳಿಗೆ ಉಪದ್ರವ ಕೊಡದೆ ಇದ್ದುವು. ಇನ್ನು ಹೆಚ್ಚು ನಡೆಯಲು ಸಾಧ್ಯವಾಗದೆ ವಿಶ್ರಾಂತಿ ತೆಗೆದುಕೊಳ್ಳಲು ಒಂದು ಸಣ್ಣ ಗುಡಿಸಲನ್ನು ನೋಡಿ ಅಲ್ಲಿಗೆ ಹೋದಳು. ಅಲ್ಲಿ ಒಂದು ಮೇಜಿನ ಮೇಲೆ ಬಿಳಿಯ ವಸ್ತ್ರವನ್ನು ಹಾಸಿದ್ದರು. ವಸ್ತ್ರದ ಮೇಲೆ ಏಳು ತುಂಡು ಬ್ರೆಡ್ಡುಗಳುಳ್ಳ ಏಳು ಚಿಕ್ಕ ತಟ್ಟೆಗಳೂ, ಏಳು ಚಿಕ್ಕ ಗ್ಲಾಸುಗಳಲ್ಲಿ ಬ್ರಾಂಡಿಯೂ ಇದ್ದುವು; ಮತ್ತು ಕ್ರಮವಾಗಿ ಚೂರಿಗಳೂ, ಮುಳ್ಳು ಕತ್ತಿಗಳೂ ಇದ್ದುವು. ಬಹಳ ಹಸಿವೆಯಾಗಿದ್ದುದರಿಂದ ಪ್ರತಿಯೊಂದು ತಟ್ಟೆಯಿಂದಲೂ ಬ್ರೆಡ್ಡನ್ನು ತಿಂದಳು ಮತ್ತು ಬ್ರಾಂಡಿಯನ್ನು ಕುಡಿದಳು. ಇನ್ನು ತಾನು ನಿದ್ದೆ ಮಾಡಬೇಕೆಂದು ಗ್ರಹಿಸಿ, ಗೋಡೆಗೆ ಬದಿಯಲ್ಲಿರಿಸಿದ ಏಳು ಹಾಸಿಗೆಗಳನ್ನು ನೋಡಿ ಅವುಗಳಲ್ಲಿ ಮಲಗಲು ಹೋದಳು. ಒಂದು ಉದ್ದ ಮತ್ತೊಂದು ಗಿಡ್ಡವಾಗಿದ್ದುವು. ಪ್ರತಿಯೊಂದರಲ್ಲೂ ಮಲಗಿ ನೋಡಿ ಕಡೆಗೆ ಏಳನೇ ಹಾಸಿಗೆಯು ತನಗೆ ಸರಿಯಾಗಲು ಅದರಲ್ಲಿ ಮಲಗಿ ನಿದ್ದೆ ಹೋದಳು.

ಆಗ ತಾನೆ ಆ ಗುಡಿಸಲಿನ ಯಜಮಾನರು, ಏಳು ಗಿಡ್ಡ ಜನರು ಬಂದರು. ಅವರು ಪರ್ವತಗಳಲ್ಲಿ ವಾಸಿಸುತ್ತಿದ್ದರು, ಮತ್ತು ಪರ್ವತಗಳನ್ನು ಅಗೆದು ಬಂಗಾರವನ್ನು ಹುಡುಕಿ ತೆಗೆಯುತ್ತಿದ್ದರು. ಮನೆಗೆ ಬಂದು ತಮ್ಮ ಏಳು ದೀಪಗಳನ್ನು ಉರಿಸಿ ನೋಡಲು ಏನೋ ತೊಂದರೆಯಾಗಿದೆಯೆಂದು ಕಂಡರು. ಒಂದನೆಯವನು, "ನನ್ನ ಕಾಲಮಣೆಯಲ್ಲಿ ಯಾರು ಕುಳಿತುಕೊಳ್ಳುತ್ತಾ ಇದ್ದರು," ಎಂದನು. ಎರಡನೆಯವನು, "ನನ್ನ ತಟ್ಟೆಯಿಂದ ಯಾರು ತಿನ್ನುತ್ತಿದ್ದರು?" ಎಂದನು. ಮೂರನೆಯವನು, "ನನ್ನ ಬ್ರೆಡ್ಡನ್ನು ಯಾರು ತಿನ್ನುತ್ತಿದ್ದರು?" ಎಂದನು. ನಾಲ್ಕನೆಯವನು, "ನನ್ನ ಚಮಚದಲ್ಲಿ ಯಾರು ತಿನ್ನುತ್ತಿದ್ದರು?" ಎಂದನು. ಐದನೆಯವನು, "ನನ್ನ ಮುಳ್ಳುಕತ್ತಿಯನ್ನು ಯಾರು ಹಿಡಿದಿದ್ದರು?" ಎಂದನು. ಆರನೆಯವನು, "ನನ್ನ ಕತ್ತಿಯಲ್ಲಿ ಯಾರು ತುಂಡು ಮಾಡಿದ್ದರು?" ಎಂದನು. ಏಳನೆಯವನು, "ನನ್ನ ಬ್ರಾಂಡಿಯನ್ನು ಯಾರು ಕುಡಿದಿದ್ದರು?" ಎಂದನು. ಆಗ ಮೊದಲನೆಯವನು ಸುತ್ತಲೂ ನೋಡುತ್ತಾ, "ನನ್ನ ಹಾಸಿಗೆಯಲ್ಲಿ ಯಾರು ಮಲಗಿದ್ದರು?" ಎಂದನು. ಮತ್ತಿತರರು ಅವನ ಬಳಿಗೆ ಬಂದು, "ತಮ್ಮ ಹಾಸಿಗೆಯಲ್ಲಿ ಯಾರು ಮಲಗಿ

ದ್ದರು?" ಎಂದು ಬೊಬ್ಬಿಟ್ಟರು. ಏಳನೆಯವನು ಏಳನೆ ಹಾಸಿಗೆಯಲ್ಲಿ ಹಿಮಹನಿಯು ಮಲಗಿರುವುದನ್ನು ಕಂಡು, ತನ್ನ ಸಹೋದರರನ್ನು ತನ್ನ ಬಳಿಗೆ ಕರೆದು, ಅವಳನ್ನು ನೋಡಲು ಹೇಳಿದನು; ಮತ್ತು ಆಶ್ಚರ್ಯ ದಿಂದಲೂ, ಕುತೂಹಲದಿಂದಲೂ ತಮ್ಮ ದೀಪಗಳನ್ನು ತಂದು ಅವಳನ್ನು ನೋಡಿ, "ಎಷ್ಟು ಪ್ರಿಯವಾದ ಮಗು!" ಎಂದರು. ಅವಳನ್ನು ನೋಡಲು ಅವರು ಸಂತೋಷಪಟ್ಟರು ಮತ್ತು ಅವಳು ಎಚ್ಚರಗೊಳ್ಳದಂತೆ ಜಾಗ್ರತೆ ಯುಳ್ಳವರಾದರು ಮತ್ತು ಏಳನೇ ಕುಬ್ಜನು ಇತರ ಕುಬ್ಜರೊಡನೆ ಕ್ರಮ ವಾಗಿ ಕತ್ತಲು ಸರಿಯುವ ತನಕ ನಿದ್ದೆ ಹೋದನು.

ಬೆಳಿಗ್ಗೆ ಹಿಮಹನಿಯು ಕುಬ್ಜರೊಡನೆ ತನ್ನ ಎಲ್ಲಾ ವೃತ್ತಾಂತಗಳನ್ನು ತಿಳಿಸಿದಳು ಮತ್ತು ಅವರು ಅವಳನ್ನು ಕರುಣೆಯಿಂದ ನೋಡಿದರು; ಅವಳು ಎಲ್ಲಾ ಸಾಮಾನುಗಳನ್ನು ಕ್ರಮವಾಗಿ ಇರಿಸಿದರೆ ಮತ್ತು ಅವರಿಗೆ ಅಡಿಗೆ ಮಾಡಿ, ಬಟ್ಟೆ ಒಗೆದು, ಹೊಲಿದು ಹೊಸೆದು ಮಾಡಿದರೆ ಅಲ್ಲೇ ಇರಬಹು ದಾಗಿಯೂ, ಅವರು ಜಾಗ್ರತೆ ವಹಿಸುವುದಾಗಿಯೂ ಹೇಳಿದರು.

ಆನಂತರ ಅವರು ಪರ್ವತಗಳಲ್ಲಿ ಬೆಳ್ಳಿ ಮತ್ತು ಬಂಗಾರವನ್ನು ಹುಡುಕಲು ಹಗಲು ಹೊತ್ತು ಹೋಗುತ್ತಿದ್ದರು ಮತ್ತು ಹಿಮಹನಿಯು ಮನೆಯಲ್ಲೇ ಉಳಿದಳು; ಮತ್ತು ಅವಳಿಗೆ, "ನೀನು ಎಲ್ಲಿರುವಿ ಎಂದು ರಾಣಿಯು ತಿಳಿಯುವಳು ಆದ್ದರಿಂದ ಒಳಗೆ ಯಾರೂ ಬಾರದಂತೆ ಜಾಗ್ರತೆ ಯಿಂದಿರು," ಎಂದು ಸೂಚನೆ ಕೊಟ್ಟರು.

ಈಗ ರಾಣಿಯು ಹಿಮಹನಿಯು ಸತ್ತಳೆಂದು ಗ್ರಹಿಸಿ, ಇಡೀ ಪ್ರಪಂಚದಲ್ಲೆಲ್ಲಾ ತನ್ನಷ್ಟು ಸುಂದರಿ ಯಾರೂ ಇರಲಾರರೆಂದುಕೊಂಡು ಕನ್ನಡಿಯ ಬಳಿಗೆ ಹೋಗಿ, "ಕನ್ನಡಿ, ಪ್ರಪಂಚದಲ್ಲಿರುವವರಲ್ಲೆಲ್ಲಾ ಯಾರು ಚಂದ ಹೇಳು," ಎಂದಳು.

ಆಗ ಕನ್ನಡಿಯು, "ರಾಣಿ, ಪ್ರಪಂಚದಲ್ಲೆಲ್ಲಾ ಇರುವವರಲ್ಲಿ ನೀನು ಚಂದವಾಗಿರುವೆ. ಆದರೆ, ಹಿಮಹನಿಯು ಗುಡ್ಡಗಳಿಂದಾಚೆ ಹಸುರಿನ ಮರಗಳ ನೆರಳ ಕೆಳಗೆ ಏಳು ಕುಬ್ಜರಿರುವಲ್ಲಿ ವಾಸಿಸುತ್ತಿರುವಳು. ಅವಳು ಅಲ್ಲಿ ಅವಿತುಕೊಂಡಿರುವಳು. ಅವಳು ನಿನಗಿಂತಲೂ ಪ್ರಿಯಳಾಗಿರು ವಳು," ಎಂದಿತು.

ರಾಣಿಯು ಆಶ್ಚರ್ಯಚಕಿತಳಾದಳು ಮತ್ತು ಕನ್ನಡಿಯು ಹೇಳಿದುದ
ರಲ್ಲಿ ಸತ್ಯಾಂಶವಿದೆಯೆಂದು ತಿಳಿದು, ಗಿಡ್ಡ ಜನರು ವಾಸಿಸುವಲ್ಲಿಗೆ ಲಾಡಿ
ಮತ್ತು ಚೆಂಡುಗಳನ್ನು ಮಾರುವ ಚಿಲ್ಲರೆ ವ್ಯಾಪಾರಿಯ ಪೋಷಾಕಿನಿಂದ
ಬಂದು ಗುಡಿಸಲಿನ ಬಾಗಿಲನ್ನು ತಟ್ಟಿದಳು ಹಿಮಹನಿಯು ಒಳಗಿಂದ
ನೋಡಿ ಪ್ರಾಯ ಹೋದ ಹೆಂಗಸು ಉತ್ತಮ ಅತಿಥಿ ಮತ್ತು ಚಂದವಾಗಿ
ರುವಳೆಂದು ತಿಳಿದು ಒಳಗೆ ಬರಹೇಳಿದಳು. ಅವಳು ಒಳಗೆ ಬಂದು,
ಹಿಮಹನಿಯು ಧರಿಸಿದ ಲಾಡಿಯು ಉತ್ತಮವಾಗಿಲ್ಲವೆಂದು ಚಂದವಾದ
ಲಾಡಿಯಿಂದ ಜಡೆಯನ್ನು ನೇಯುವೆನೆಂದಳು. ಹಿಮಹನಿಗೆ ಬಹಳ
ಸಂತೋಷವಾಯಿತು ಮತ್ತು ಈ ಹೆಂಗಸು ಏನೂ ವಂಚನೆ ಮಾಡಲಾರಳು
ಎಂದು ಗ್ರಹಿಸಿ ಜಡೆ ನೇಯಲು ಬಿಟ್ಟಳು. ರಾಣಿಯು ಒಂದು ಲಾಡಿ
ಯನ್ನು ತೆಗೆದು ಜಡೆ ನೇಯಲು ಪ್ರಾರಂಭಿಸಿದಳು. ಸ್ವಲ್ಪ ಸಮಯ
ಕಳೆಯುತ್ತಲೇ ಜಡೆಯನ್ನು ಚೆನ್ನಾಗಿ ಎಳೆದು ಅವಳ ಶ್ವಾಸ ಕಟ್ಟುವಂತೆ
ಮಾಡಿದಳು. ಹಿಮಹನಿಯು ಸತ್ತಂತೆ ಬಿದ್ದಳು. "ನಿನ್ನ ಚಂದವು ಅಂತ್ಯ
ವಾಯಿತು," ಎಂದು ಮತ್ಸರವುಳ್ಳ ರಾಣಿಯು ಹೇಳುತ್ತ ಅಲ್ಲಿಂದ ತನ್ನ ಅರ
ಮನೆಗೆ ಹೊರಟುಹೋದಳು.

ಸಂಜೆಯಾಗಲು ಏಳು ಗಿಡ್ಡ ಜನರು ಗುಡಿಸಲಿಗೆ ಬರಲು ಹಿಮ
ಹನಿಯು ಬಿದ್ದಿರುವುದನ್ನು ಕಂಡರು. ಸತ್ತಂತೆ ಬಿದ್ದಿರಲು ಅವರು ಅವ
ಳನ್ನು ಮೆಲ್ಲನೆ ಎತ್ತಿದರು. ಆಗ ಅವಳು ಸ್ವಲ್ಪ ಚೇತರಿಸಿಕೊಂಡಳು.
"ಇಲ್ಲಿಗೆ ಬಂದ ಪ್ರಾಯಹೋದ ಹೆಂಗಸು ರಾಣಿ. ನಾವಿಲ್ಲದಿರುವಾಗ
ಬಹಳ ಜಾಗ್ರತೆ ವಹಿಸಿ, ಇನ್ನು ಮುಂದೆ ಯಾರನ್ನೂ ಒಳಗೆ ಬಿಡದಿರು,"
ಎಂದರು.

ರಾಣಿಯು ಕನ್ನಡಿಯ ಬಳಿಗೆ ಬರಲು ಅವಳು ಆಶ್ಚರ್ಯಗೊಳ್ಳು
ವಂತೆ ಕನ್ನಡಿಯು, "ರಾಣೀ, ಪ್ರಪಂಚದಲ್ಲೆಲ್ಲಾ ಇರುವವರಲ್ಲಿ ನೀನು
ಚಂದವಾಗಿರುವೆ. ಆದರೆ ಹಿಮಹನಿಯು ಗುಡ್ಡಗಳಿಂದಾಚೆ ಹಸುರೆಲೆ
ಮರಗಳ ನೆರಳ ಕೆಳಗೆ ಏಳು ಕುಬ್ಜರಿರುವಲ್ಲಿ ವಾಸಿಸಿರುವಳು. ಅವಳು
ಅಲ್ಲಿ ಅವಿತುಕೊಂಡಿರುವಳು. ಅವಳು ನಿನಗಿಂತಲೂ ಪ್ರಿಯವಾಗಿರುವಳು,"
ಎಂದಿತು.

ಹಿಮಹನಿಯು ವಾಸಿಸಿರುವುದನ್ನು ಕೇಳಿ ಹೃದಯದಲ್ಲಿ ವೈರ ಮತ್ತು ಮತ್ಸರಗಳಿಂದ ರಾಣಿಯ ರಕ್ತವು ಶಿಥಿಲಗೊಂಡಿತು. ಪುನಃ ಮೊದಲಿಗಿಂತ ಬೇರೆ ವೇಷ ಪಲ್ಲಟಿಸಿ ಒಂದು ವಿಷದ ಹಣಿಗೆಯನ್ನು ತೆಗೆದುಕೊಂಡು ಹೊರಟಳು. ಕುಬ್ಜರ ಗುಡಿಸಲಿಗೆ ಬಂದು ಬಾಗಿಲು ತಟ್ಟಿದಳು. ಹಿಮಹನಿಯು, "ನಾನು ಬಾಗಿಲು ತೆರೆಯುವುದಿಲ್ಲ," ಎಂದಳು. ರಾಣಿಯು, "ನನ್ನ ಚಂದವಾದ ಹಣಿಗೆಗಳನ್ನು ಮಾತ್ರ ನೋಡು," ಎಂದು ವಿಷದ ಹಣಿಗೆಯನ್ನು ಕೊಟ್ಟಳು. ಹಣಿಗೆಯನ್ನು ತೆಗೆದುಕೊಂಡ ಕೂಡಲೇ ಹಿಮಹನಿಯು ಅದನ್ನು ನೋಡಿ ತಲೆಕೂದಲನ್ನು ಬಾಚಲು ಪ್ರಯತ್ನಿಸಿದಳು. ಅದು ತಲೆಗೆ ಮುಟ್ಟಿದ ಕೂಡಲೇ ವಿಷವು ಪಸರಿಸಿ ಅವಳು ಮೂರ್ಛೆ ಹೋಗಿಬಿದ್ದಳು. "ಅಲ್ಲಿ ನೀನು ಮಲಗಬಹುದು" ಎಂದು ರಾಣಿ ಅಲ್ಲಿಂದ ಹೊರಟು ಬಂದಳು. ಗಿಡ್ಡ ಜನರು ಗುಡಿಸಲಿಗೆ ಎಂದಿನಂತೆ ಬೇಗನೆ ಬರಲು ಹಿಮಹನಿಯು ಮೂರ್ಛೆಹೋಗಿರುವುದನ್ನು ಕಂಡು ಅತ್ತಿತ್ತ ನೋಡಲು ವಿಷದ ಹಣಿಗೆಯನ್ನೂ ಕಂಡರು. ಹಣಿಗೆಯನ್ನು ತೆಗೆಯಲು ಹಿಮಹನಿಯು ಮೊದಲಿನಂತೆ ಚೇತರಿಸಿದಳು ಮತ್ತು ಗಿಡ್ಡ ಜನರು ಅವಳೊಡನೆ ಪುನಃ ಪುನಃ ಜಾಗ್ರತೆಯಿಂದಿರಲು ಹೇಳಿ ಯಾರನ್ನೂ ಒಳಗೆ ಬಿಡದಂತೆ ಎಚ್ಚರಿಸಿದರು.

ಇಷ್ಟರಲ್ಲಿ ರಾಣಿಯು ಕನ್ನಡಿಯ ಬಳಿಗೆ ಬರಲು, ಕನ್ನಡಿಯು ಮೊದಲಿನಂತೆಯೆ ಉತ್ತರ ಕೊಟ್ಟಿತು. ಬಹಳ ಸಿಟ್ಟಿನಿಂದ ರಾಣಿಯು, "ನನ್ನ ಜೀವ ಏನೆಯಾದರೂ ಹಿಮಹನಿಯು ಸಾಯಬೇಕು," ಎಂದು ಒಂದು ವಿಷದ ಎಪ್ಪಲು ಹಣ್ಣನ್ನು ಕಂಡಳು. ಹೊರಗೆ ನೋಡಲು ಪ್ರಕಾಶಮಾನವಾಗಿಯೂ, ಆಕರ್ಷಕವಾಗಿಯೂ ಕಂಡಿತು. ಆದರೆ ಆ ಹಣ್ಣನ್ನು ತಿಂದವರು ನಿಶ್ಚಯವಾಗಿ ಸಾಯುವರು. ಅಂತೂ ಅವಳು ಬೇಸಾಯ ಮಾಡುವ ಹೆಣ್ಣಿನ ಪೋಷಾಕನ್ನು ಧರಿಸಿ, ಏಳು ಗಿಡ್ಡ ಜನರು ವಾಸಿಸುವ ಗುಡಿಸಲಿಗೆ ಬಂದಳು. ಬಾಗಿಲು ತಟ್ಟಿ, "ಎಪ್ಪಲು ಹಣ್ಣು ಬೇಕೇ?" ಎಂದು ಕೇಳಿದಳು. "ನಾನು ಯಾರನ್ನೂ ಒಳಗೆ ಬಿಡುವುದಿಲ್ಲ. ಬಾಗಿಲು ತೆರೆಯುವುದಿಲ್ಲ," ಎಂದಳು. ಆಗ ರಾಣಿಯು ನೀನು ಎಪ್ಪಲು ಹಣ್ಣನ್ನು ನೋಡು, ಅದರ ಗುಚಿಯನ್ನು ನೋಡು, ಅದು ವಿಷದ ವಸ್ತುವಲ್ಲ. ಒಂದು ಬದಿಯನ್ನು ನಾನು ತಿನ್ನುವೆನು, ಇನ್ನೊಂದು ಬದಿಯನ್ನು ನೀನು ತಿನ್ನು," ಎಂದಳು. ಅದರ ಒಂದು ಬದಿಯು ಮಾತ್ರ ವಿಷದಿಂದ ಕೂಡಿತ್ತು. ಆ

ಹಣ್ಣನ್ನು ಈ ಹೆಂಗಸು ತಿನ್ನುವುದನ್ನು ನೋಡಿ ಹಿಮಹಸಿಗೆ ಬಾಯಲ್ಲಿ ನೀರೂರಿತು. ಒಂದು ಬದಿಯನ್ನು ತಿಂದ ಮೇಲೆ ರಾಣಿಯು ಅದನ್ನು ಹಿಮಹಸಿಯ ಕೈಗೆ ಕೊಟ್ಟಳು. ಅವಳು ಆತುರದಿಂದ ಅದನ್ನು ತೆಗೆದುಕೊಂಡು ತಿನ್ನುವಷ್ಟರಲ್ಲೇ ಅದು ವಿಷದ ಬದಿಯಾಗಿದ್ದುದರಿಂದ ಸತ್ತುಬಿದ್ದಳು. "ಇನ್ನು ನೀನು ಜೀವಂತವಾಗಿ ಏಳಲಾರೆ," ಎಂದು ರಾಣಿಯು ತನ್ನ ಅರಮನೆಗೆ ಹೋದಳು. ಮತ್ತು ಕನ್ನಡಿಯ ಬಳಿಗೆ ಬರಲು ಕನ್ನಡಿಯು, "ಈಗ ನೀನು ಪ್ರಪಂಚದಲ್ಲಿರುವವರಲ್ಲೆಲ್ಲಾ ಚೆಲುವೆಯರಲ್ಲಿ ಚೆಲುವೆ," ಎಂದಿತು. ಈಗ ಅವಳ ಹೃದಯ ತುಂಬುವಷ್ಟು ಅವಳ ಹೃದಯ ಸಂತೋಷಗೊಂಡಿತು.

ಸಂಜೆಯಾಗಲು ಕುಬ್ಜರು ಬಂದರು ಹಿಮಹಸಿಯು ಸತ್ತುಬಿದ್ದಿರುವುದನ್ನು ನೋಡಿದರು. ತುಟಿಗಳಿಂದ ಶ್ವಾಸವು ಹೋಗದಿರುವುದನ್ನು ನೋಡಿ ಅವಳು ಸತ್ತಿರುವಳೆಂದೇ ನಿರ್ಣಯಿಸಿದರು. ಬಹಳವಾಗಿ ನೊಂದರು. ಕಡೆಗೆ ಅವಳನ್ನು ಒಂದು ಕಂಬಳಿಯ ಮೇಲೆ ಮಲಗಿಸಿದರು ಮತ್ತು ನೆಲದಡಿಯಲ್ಲಿ ಹುಗಿಯುವುದೆಂದು ನಿರ್ಣಯಿಸಿದರು. ಮೂರು ದಿನಗಳನ್ನು ಹಾಗೆಯೇ ಕಳೆದರು. ಆದರೆ ಅವಳ ಕೆನ್ನೆಗಳು ಕೆಂಪಗೇ ಇದ್ದುವು. ನಂತರ ಅವಳನ್ನು ಜಂಗಿ ನೆಲದಲ್ಲಿ ಹುಗಿಯಬಾರದೆಂದು ಗ್ರಹಿಸಿ ಒಂದು ಗ್ಲಾಸಿನ ಹೆಣದ ಪೆಟ್ಟಿಗೆಯನ್ನು ಮಾಡಿಸಿ ಅದರಲ್ಲಿ ಅವಳನ್ನು ಮಲಗಿಸಿದರು. ಬಂಗಾರದ ಮೇಲೆ ಅವಳ ಹೆಸರನ್ನು ಕೆತ್ತಿಸಿದರು. ಅವಳನ್ನು ನೋಡಲು ಬಹಳ ಆಸಕ್ತಿಯುಳ್ಳವರಾಗಿ ಆ ಪೆಟ್ಟಿಗೆಯನ್ನು ನೋಡುತ್ತಾ ಕುಳಿತರು. ಅದನ್ನು ಕಡೆಗೆ ಗುಡ್ಡದ ತುದಿಗೆ ಕೊಂಡೊಯ್ದು ಒಬ್ಬನು ಅದನ್ನು ಕಾದುಕೊಂಡಿರಲು ನಿಶ್ಚಯಿಸಿದರು. ಒಬ್ಬನು ಯಾವಾಗಲೂ ಅದರ ಬಳಿಯಲ್ಲೇ ಇರುತ್ತಿದ್ದನು. ಹಕ್ಕಿಗಳೂ, ಮೃಗಗಳೂ ಬಂದು ಅವಳನ್ನು ನೋಡಿದುವು. ಅವುಗಳು ಅವಳನ್ನು ನೋಡಿದೊಡನೆ ಬಹಳ ದುಃಖಿಸುತ್ತಿದ್ದುವು. ಮೊದಲು ಒಂದು ಗೂಬೆ ಬಂದಿತು, ಎರಡನೆಯದಾಗಿ ಒಂದು ಹದ್ದು, ಮತ್ತು ಮೂರನೆಯದಾಗಿ ಒಂದು ಪಾರಿವಾಳ ಬಂದುವು.

ಹೀಗೆ ಸುಮಾರು ಸಮಯ ಹಿಮಹಸಿಯು ಪೆಟ್ಟಿಗೆಯೊಳಗೇ ಮಲಗಿದ್ದಳು. ಅವಳು ನಿದ್ರೆ ಹೋದವಳಂತೆಯೇ ಇದ್ದಳು. ಹಿಮದಂತೆ ಬೆಳ್ಳಗೂ, ರಕ್ತದಂತೆ ಕೆಂಪಗೂ, ಬೀಟೆಯ ಮರದಂತೆ ಕಪ್ಪಗೂ ಇದ್ದಳು. ಕಡೆಗೆ ಅಲ್ಲಿಗೆ ಒಬ್ಬ ರಾಜಕುಮಾರನು ಬಂದನು. ರಾಜ

ುವಮಾರನು ಪೆಟ್ಟಿಗೆಯನ್ನು ನೋಡಿ ಬಂಗಾರದಲ್ಲಿ ಕೆತ್ತಿದ ಅಕ್ಷರವನ್ನು ದಿದನು. ರಾಜಕುಮಾರನು ಕುಬ್ಜರಿಗೆ ಬೇಕಾದಷ್ಟು ಹಣ ಕೊಡುವೆ ಂದನು. ಆದರೆ ಅವರು, "ಇಡೀ ಪ್ರಪಂಚದಲ್ಲಿರುವ ಎಲ್ಲಾ ಬಂಗಾರ ದ್ದರೂ ನಾವು ಅವಳನ್ನು ಕೊಡಲಾರೆವು," ಎಂದರು. ಕಡೆಗೆ ಅವರು ಅವನಲ್ಲಿ ಕರುಣೆಗೊಂಡು ಹೆಣದ ಪೆಟ್ಟಿಗೆಯನ್ನು ಕೊಂಡುಹೋಗಬಹು ಂದರು. ರಾಜಕುಮಾರನು ಸಂತೋಷದಿಂದ ಅದನ್ನು ತನ್ನ ಕೈಗಳಿಂದ ತ್ತುವಷ್ಟರಲ್ಲಿ ಹಿಮಹನಿಯು ಎಚ್ಚರಗೊಂಡು ಅವಳ ತುಟಿಗಳಿಂದ ಪ್ಪಲು ತುಂಡು ಕೆಳಗೆ ಬಿತ್ತು. "ನಾನು ಈಗ ಎಲ್ಲಿರುವೆನು?" ಎಂದು ಳಿದಳು. ರಾಜಕುಮಾರನು, "ನೀನು ನನ್ನೊಡನೆ ಸುರಕ್ಷಿತವಾಗಿರುವೆ," ಂದು ವೃತ್ತಾಂತವನ್ನೆಲ್ಲ ತಿಳಿಸಿದನು "ನಾನು ನಿನ್ನನ್ನು ಇಡೀ ಲೋಕ ಂದಲೂ ಹೆಚ್ಚಾಗಿ ಪ್ರೀತಿಸುವೆನು. ನನ್ನೊಂದಿಗೆ ನನ್ನ ತಂದೆಯ ಅರ ಮನೆಗೆ ಬಾ ಮತ್ತು ನೀನು ನನ್ನ ಹೆಂಡತಿಯಾಗುವೆ" ಎಂದನು. ಹಿಮ ನಿಯು ಅದಕ್ಕೊಪ್ಪಿದಳು ಮತ್ತು ಎಲ್ಲವೂ ಬಹಳ ಆಡಂಬರದಿಂದಲೂ, ಭವದಿಂದಲೂ ಮದುವೆಯ ಸನ್ನಾಹವು ನೆರವೇರಲ್ಪಟ್ಟಿತು.

ಔತಣದ ಊಟಕ್ಕೆ ಹಿಮಹನಿಯ ಹಳೆ ವೈರಿ ರಾಣಿಯನ್ನೂ ಸ್ವಾಗತಿ ದ್ದರು; ಮತ್ತು ಅವಳು ಕನ್ನಡಿಯಲ್ಲಿ ಚೆಲೋದಾದ ಉಡಿಗೆ ತೊಡಿಗೆಗಳ ಟ್ಟು ನೋಡಿ, "ಕನ್ನಡಿ, ನಿಜವಾಗಿ ಹೇಳು, ಸ್ತ್ರೀಯರಲ್ಲೆಲ್ಲಾ ಅತಿ ಲುವೆ ಯಾರು," ಎಂದು ಕೇಳಿದಳು. ಕನ್ನಡಿಯು ಹೇಳಿತು, "ಇಲ್ಲಿ ನೇ ಚಂದವಾಗಿರುವವಳು. ಹೊಸತಾಗಿ ಆಗಿರುವ ರಾಣಿ ಹೆಚ್ಚಾಗಿ ಯುಳ್ಳವಳಾಗಿರುವಳು," ಎಂದಿತು. ಇದನ್ನು ಕೇಳಿ ರಾಣಿಯು ಬಹಳ ೋಪಗೊಂಡಳು ಮತ್ತು ಹೊಸ ರಾಣಿಯನ್ನು ನೋಡಲು ಬಹಳ ಆಸೆ ುಳ್ಳವಳಾಗಿದ್ದಳು. ಹೀಗೆ ಔತಣದ ಊಟಕ್ಕೆ ಬಂದು ನೋಡಲು ವಳು ಹಿಮಹನಿಯೇ ಆಗಿದ್ದಳು. ಅವಳನ್ನು ನೋಡಿ ಮನೋವಿಕಾರ ೊಂಡು, ಗಂಟಲುಕಟ್ಟಿ ಅಸ್ವಸ್ಥಗೊಂಡಳು ಮತ್ತು ಸ್ವಲ್ಪ ಸಮಯದಲ್ಲೇ ತ್ತುಹೋದಳು. ನಂತರ ಹಿಮಹನಿಯೂ ರಾಜಕುಮಾರನೂ ಅರಮನೆ ುಲ್ಲಿ ಅನೇಕಾನೇಕ ವರ್ಷಗಳ ತನಕ ಸಂತೋಷದಿಂದ ಆ ರಾಜ್ಯವನ್ನು ಳಿದರು.

೨. ಕೃತಜ್ಞತೆಯುಳ್ಳ ಪ್ರಾಣಿಗಳು

ಒಬ್ಬನು ತನ, ಐಶ್ವರ್ಯವನ್ನೆಲ್ಲಾ ಕಳೆದುಕೊಂಡು ಪ್ರವಾಸವನ್ನು ಕೈಕೊಳ್ಳಲು ನಿಶ್ಚಯಿಸಿದನು. ತನ್ನಲ್ಲಿದ್ದ ಹಣದೊಂದಿಗೆ ಪ್ರಪಂಚವನ್ನು ಸುತ್ತಾಡಲು ಹೊರಟನು. ಹೀಗೆ ಹೊರಟು ಮೊದಲು ಒಂದು ಹಳ್ಳಿಗೆ ಬಂದು ಕೆಲವು ಜನರ ಗುಂಪನ್ನು ನೋಡಿದನು. ಅವರು ಓಡಾಡುತ್ತಾ, ಕರೆಯುತ್ತಾ ಗುಲ್ಲುಮಾಡುತ್ತಿದ್ದರು. ಅವನು ಅವರೊಡನೆ, "ಏನು ಸಂಗತಿ?" ಎಂದು ಕೇಳಿದನು. ಅವರು ಹೇಳಿದರು—"ಒಂದು ಇಲಿ ಇದೆ. ಅದನ್ನು ನಾವು ಬೇಕಾದಂತೆ ಕುಣಿಸುತ್ತೇವೆ ಅದನು ನೋಡು. ಎಷ್ಟು ರಮ್ಯವಾದ ನೋಟ. ಅದು ಹೇಗೆ ಕುಣಿಯುತ್ತದೆ!" ಆಗ ಪ್ರಯಾಣಿಕನು ಇಲಿಯನ್ನು ನೋಡಿ ಕರುಣೆಗೊಂಡು, "ಆ ಇಲಿಯನ್ನು ಬಿಡಿ. ನಾನು ನಿಮಗೆ ಹಣವನ್ನು ಕೊಡುವೆನು," ಎಂದನು. ಹೀಗೆ ಅವರಿಗೆ ಹಣಕೊಟ್ಟು ಇಲಿಯನ್ನು ಬಿಟ್ಟನು. ಇಲಿಯು ಓಡಿ ಒಂದು ಬಿಲದೊಳಗೆ ಮಾಯ ವಾಯಿತು.

ಇನ್ನೊಂದು ಹಳ್ಳಿಗೆ ಬರಲು ಕೆಲವು ಮಕ್ಕಳು ಒಂದು ಕತ್ತೆಯನ್ನು ಹಿಂಬದಿಯ ಕಾಲುಗಳಿಂದ ನಿಲ್ಲಿಸಿ ಎಡವಿ ಬೀಳುವುದನ್ನೂ, ನೆಗೆತವನ್ನೂ, ನೋಡಿ ನಗಾಡುತ್ತಾ ಕೇಕೆ ಹೊಡೆಯುತ್ತಿದ್ದರು. ಪ್ರಯಾಣಿಕನು ತನ್ನಲ್ಲಿದ್ದ ಸ್ವಲ್ಪ ಹಣವನ್ನು ಅವರಿಗೆ ಕೊಟ್ಟು ಬಡಪ್ರಾಣಿಯನ್ನು ಬಿಡಿಸಬೇಕಾಯಿತು.

ಇನ್ನೊಂದು ಹಳ್ಳಿಗೆ ಹೋಗಲು ಕೆಲವು ತರುಣರು ಒಂದು ಕರಡಿ ಯನ್ನು ಕುಣಿಸುತ್ತಾ ಅದಕ್ಕೆ ಬಹಳ ಕಷ್ಟವನ್ನುಂಟುಮಾಡಿ ನಗಾಡು ತ್ತಿದ್ದರು. ಅದನ್ನು ಬಿಡಲು ಈ ಪ್ರಯಾಣಿಕನು ತನ್ನಲ್ಲಿದ್ದ ಸ್ವಲ್ಪ ಹಣ ವನ್ನು ಕೊಟ್ಟನು. ಅದು ಮೊದಲಿನಂತೆಯೇ ಸಂತೋಷಪಟ್ಟಿತು.

ಹೀಗೆ ತಿರುಗಾಡುತ್ತಾ ಹೋಗಲು ತನ್ನಲ್ಲಿ ಚಿಕ್ಕಾಸೂ ಉಳಿಯದಿರಲು ತನ್ನಲ್ಲೇ ಹೇಳಿದನು. "ರಾಜನು ತನ್ನ ಖಜಾನದಲ್ಲಿ ಹಣವಿಟ್ಟಿದ್ದರೂ ಉಪ ಯೋಗಿಸುವುದಿಲ್ಲ. ನಾನು ಹಸಿವೆಯಿಂದ ಸಾಯಲು ಸಾಧ್ಯವಿಲ್ಲ. ಯಾರಿಂದಾದರೂ ಸಾಲ ಪಡೆಯಬೇಕು. ಐಶ್ವರ್ಯವಂತನಾದ ಮೇಲೆ ಅವನಿಗೆ ಪುನಃ ಕೊಡಬೇಕು."

ಪ್ರಯಾಣಿಕನು ರಾಜನ ಅರಮನೆಗೆ ಹೋಗಿ ಖಜಾನೆಯಿಂದ ಬಹಳ ಸ್ವಲ್ಪ ಹಣವನ್ನು ತೆಗೆದುಕೊಂಡು ಹೊರಗೆಬರಲು, ಅರಮನೆಯ ಕಾವಲುಗಾರರು ಅವನನ್ನು ನೋಡಿ ಕಳ್ಳನೆಂದು ಗ್ರಹಿಸಿ ನ್ಯಾಯಾಧೀಶರಲ್ಲಿಗೆ ಕಳುಹಿಸಿದರು. ಅವರು ಅವನನ್ನು ನೀರಿನ ಒಂದು ಪೆಟ್ಟಿಗೆಯಲ್ಲಿರಲು ಕಳುಹಿಸಿದರು. ಹೀಗೆ ಅವನನ್ನು ನೀರಿರುವ ಒಂದು ದೊಡ್ಡ ಪೆಟ್ಟಿಗೆಯೊಳಗೆ ಹಾಕಿ ಮುಚ್ಚಿದರು.

ನೀರು ಹೊರಗೆ ಹೋಗಲು ಅದರಲ್ಲಿ ತೂತುಗಳಿದ್ದುವು. ಅವನಿಗೆ ಒಂದು ಹೂಜಿ ನೀರು ಮತ್ತು ತಿನ್ನಲು ಬ್ರೆಡ್ಡನ್ನು ಕೊಟ್ಟರು. ಅವನು ನೀರಿನಲ್ಲಿ ಈಜಾಡಲು ಅವನಿಗೆ ಏನೋ ಚುಚ್ಚಿದಂತಾಗಿ ಹೊರಳಾಡುವಾಗ ಫಕ್ಕನೆ ಮುಚ್ಚಳವು ತೆರೆಯಲ್ಪಟ್ಟು, ನೀರು ಹೊರಗೆ ಹರಿಯಿತು; ಮತ್ತು ಅಲ್ಲೇ ಅವನನ್ನು ಬಿಡಿಸಿದ ಇಲಿಯನ್ನು ನೋಡಿದನು. ಇಲಿಯು ಅವನಿಗೆ ಈ ರೀತಿ ಸಹಾಯ ಮಾಡಿತು. ಅನಂತರ ಮೊದಲಿನ ಕತ್ತೆಯೂ, ಕರಡಿಯೂ ಬಂದುವು. ಅವುಗಳೆಲ್ಲಾ ಅವನಿಗೆ ಸಹಾಯ ಮಾಡಿದುವು.

ಆನಂತರ ಅವುಗಳು ಒಟ್ಟು ಸೇರಿ ಮುಂದಿನ ಉಪಾಯವೇನು ಎಂದು ಆಲೋಚಿಸಿದುವು. ಆಗ ಒಂದು ದೊಡ್ಡ ತೆರೆಯು ಒಂದು ಚಂದವಾದ ಬಿಳಿಕಲ್ಲನ್ನು ದಡಕ್ಕೆ ತಂದು ಬಿಟ್ಟಿತು. ಕರಡಿಯು, "ಅದನ್ನು ತೆಗೆದುಕೊಂಡರೆ ತುಂಬಾ ಪ್ರಯೋಜನವಿದೆ. ಅದನ್ನು ಹಿಡಿದುಕೊಂಡಾಗ, ತಾನು ಗ್ರಹಿಸಿದ್ದೆಲ್ಲಾ ಸಿಗುವುದು," ಎಂದಿತು. ಪ್ರಯಾಣಿಕನು ಅದನ್ನು ತೆಗೆದುಕೊಂಡು ಒಂದು ಅರಮನೆ, ಒಂದು ಮನೋಹರವಾದ ಹೂದೋಟ, ಒಂದು ಕುದುರೆ ಆಲಯ ಇವುಗಳು ಸಿಗಬೇಕೆಂದು ಗ್ರಹಿಸಿದನು. ಹಾಗೆಯೇ ಆಯಿತು ಮತ್ತು ತನ್ನ ಅರಮನೆಯಲ್ಲಿ ಆಲಯ ಕುದುರೆಗಳೊಂದಿಗೆ ಬಂದು ನಿಂತನು. ಎಲ್ಲವೂ ಅಂದವಾದ ಸುರಕ್ಷಿತವಾದ ದೃಶ್ಯವೆನಿಸಿತು.

ಸ್ವಲ್ಪ ಸಮಯದ ನಂತರ ಕೆಲವು ವ್ಯಾಪಾರಸ್ಥರು ಅಲ್ಲಿಗೆ ಬಂದರು. ಮೊದಲಿನ ಸರ್ತಿ ಕಾಣದ ಈ ಅರಮನೆಯನ್ನು ಕಂಡು ಅವರು ಆಶ್ಚರ್ಯಪಟ್ಟು ತಮ್ಮೊಳಗೆ, "ಇಷ್ಟು ಬೇಗನೆ ಇಲ್ಲಿ ಅರಮನೆಯು ಹೇಗೆ ಕಟ್ಟಲ್ಪಟ್ಟಿತು? ಇಲ್ಲಿ ಬರಿಯ ಮರುಭೂಮಿಯಿತ್ತು," ಎಂದುಕೊಂಡು ಅರಮನೆಯೊಳಕ್ಕೆ ಬಂದು ಕುತೂಹಲದಿಂದ ರಾಜನೊಡನೆ, "ಇಷ್ಟು ಬೇಗನೆ ಈ ಅರಮನೆಯನ್ನು ಹೇಗೆ ಕಟ್ಟಿದಿರಿ?" ಎಂದು ಕೇಳಿದರು. ಆಗ ರಾಜನು, "ಅದು

ಒಂದು ಬಿಳಿಯ ಕಲ್ಲಿನಿಂದ ಕಟ್ಟಲ್ಪಟ್ಟಿತು," ಎಂದನು. ಅದನ್ನು ನೋಡಲು ಆ ಕಲ್ಲನ್ನು ಕೊಂಡುಕೊಳ್ಳಲು ಆಸೆಯುಳ್ಳವರಾಗಿ, ವ್ಯಾಪಾರಸ್ಥರು ತಮ್ಮ ಹಲವಾರು ಅತಿರೇಕ ಬೆಲೆಬಾಳುವ ಸಾಮಾನುಗಳನ್ನು ತೋರಿಸಿ, "ಅದನ್ನು ಮಾರುವುದಾದರೆ ಅವುಗಳನ್ನು ಕೊಡುವೆವು," ಎಂದರು. ರಾಜನು ಅವರು ತಂದ ಸಾಮಾನುಗಳನ್ನು ನೋಡುವವನಾಗಿ ತನ್ನ ಅಮೂಲ್ಯವಾದ ಬೆಲೆಯುಳ್ಳ, ಅಂಥ ಅನೇಕ ಸಾಮಾನುಗಳನ್ನು ಕೊಂಡುಕೊಳ್ಳಬಹುದಾದ ಆ ಕಲ್ಲಿನ ಪ್ರಯೋಜನವನ್ನು ಮರೆತು, ಅವರ ಮಾತಿಗೆ ಒಪ್ಪಿದನು.

ಆ ಕಲ್ಲು ತನ್ನ ಕೈಯಿಂದ ವ್ಯಾಪಾರಸ್ಥರ ಕೈಗೆ ತಲಪುವುದೇ ಸರಿ, ತನ್ನ ಅರಮನೆಯೆಲ್ಲವೂ ಮಾಯವಾಗಿ ತಾನು ಮೊದಲಿನಂತೆ ನೀರಿನ ಪೆಟ್ಟಿಗೆಯಲ್ಲಿ ತನ್ನ ಹೂಜಿ ಮತ್ತು ಬ್ರೆಡ್ಡಿನೊಂದಿಗೆ ಇರಿಸಲ್ಪಟ್ಟನು. ಇಲಿಯು ಈಗ ಮೊದಲಿಗಿಂತ ದೊಡ್ಡ ಬೀಗವಿರುವುದರಿಂದ ಅದನ್ನು ಕಳಚಲು ಶಕ್ತವಾಗಲಿಲ್ಲ. ಆಗ ಕರಡಿಯು, "ನಾವು ಆ ಆಶ್ಚರ್ಯಜನಕಿತ ಕಲ್ಲನ್ನು ಹಿಂದಕ್ಕೆ ಪಡೆಯಬೇಕು, ಅಲ್ಲವಾದರೆ ನಾವು ಮಾಡುವ ಕೆಲಸವೆಲ್ಲವೂ ನಿಷ್ಪ್ರಯೋಜಕವಾಗುವುದು," ಎಂದಿತು

ಇಷ್ಟರಲ್ಲಿ ವ್ಯಾಪಾರಸ್ಥರು ದೊಡ್ಡ ಅರಮನೆಯಲ್ಲಿ ಸುಖದಿಂದ ಇದ್ದರು. ಇಲಿ, ಕತ್ತೆ ಮತ್ತು ಕರಡಿ ಈ ಮೂರು ಮಿತ್ರರು ಅನೇಕ ಸ್ಥಳಗಳಲ್ಲಿ ಸುತ್ತಾಡಲು ಹೊರಟು ಈ ಅರಮನೆಗೆ ಬಂದು ಮುಟ್ಟಿದುವು. ಕರಡಿಯು ಇಲಿಯೊಡನೆ ಹೀಗೆ ಹೇಳಿತು: "ನೀನು ಚಿಕ್ಕವನು. ಬೀಗದ ತೂತಿನೊಳಗಿಂದ ಒಳಕ್ಕೆ ಹೋಗಿ ಕಲ್ಲು ಎಲ್ಲಿದೆ ಎಂದು ನೋಡು. ನಿನ್ನನ್ನು ಯಾರೂ ನೋಡಲಾರರು." ಇಲಿಯು ಕರಡಿಯು ಹೇಳಿದಂತೆ ಮಾಡಿತು. ಇಲಿಯು ಕೋಣೆಯಲ್ಲೆಲ್ಲಾ ಹುಡುಕಾಡಿ ಹೇಳಿತು, "ಇಷ್ಟು ಒಳ್ಳೆಯ ಸುದ್ದಿಯಿಲ್ಲ. ಕಲ್ಲನ್ನು ಒಂದು ರೇಶಿಮೆ ನೂಲಿನಿಂದ ಕಟ್ಟಲ್ಪಟ್ಟಿದೆ, ಮತ್ತು ಕನ್ನಡಿಯ ಕೆಳಗಿನ ಬದಿಯಲ್ಲಿ ತೂಗಾಡಿಸಲ್ಪಟ್ಟಿದೆ ಮತ್ತು ಪ್ರಕಾಶಮಾನವಾದ ಕಣ್ಣುಗಳಿಂದ ಕೂಡಿದ ಒಂದು ದೊಡ್ಡ ಬೆಕ್ಕು ಅದರ ಬದಿಯಲ್ಲಿ ಕಾದುಕೊಂಡಿದೆ," ಎಂದಿತು. ಅವುಗಳದನ್ನು ಸೇರಿ ತುಂಬಾ ಆಲೋಚಿಸಿ, ಪುನಃ ಹೋಗು ಮತ್ತು ಯಜಮಾನನು ನಿದ್ರಿಸುವ ತನಕ ಕಾದುಕೊಂಡಿರು. ನಂತರ ಅವನ ಮೂಗನ್ನು ನೆಕ್ಕಿ, ತಲೆಕೂದಲನ್ನು ಎಳೆ ಎಂದುವು. ಇಲಿಯು ಪುನಃ ಅರಮನೆಗೆ ಬಂದಿತು; ಮತ್ತು ತನ್ನ ಮಿತ್ರರಿಂದಂತೆ ಮಾಡಿತು. ಆಗ ಯಜ

ಮಾನನು ಎಚ್ಚರಗೊಂಡು—"ಈ ಬೆಕ್ಕುಗಳು ನಿಷ್ಪ್ರಯೋಜಕ. ಇಲಿಗಳು ನನ್ನ ಮೂಗನ್ನು ತಿನ್ನಲಿಕ್ಕೂ ತಲೆಕೂದಲನ್ನು ತಲೆಯಿಂದ ಎಳೆಯಲೂ ಬಿಟ್ಟಿವೆ," ಹೀಗೆ ಹೇಳುತ್ತ ಅವುಗಳನ್ನು ಓಡಿಸಲು ಅವನು ಹೊರಗೆ ಬಂದನು. ಇಲಿಗೆ ಈಗ ಹೆಚ್ಚು ಅವಕಾಶ ಮಾಡಿಕೊಟ್ಟಂತಾಯಿತು.

ಮತ್ತೊಂದು ರಾತ್ರೆಯೂ ಇಲಿಯು ಒಳಗೆ ಸರಿಯಿತು. ಯಜಮಾನನು ನಿದ್ರಿಸಿದ ಕೂಡಲೆ ರೇಶಿಮೆಯ ನೂಲನ್ನು ಚಿವುಟಿ ಕತ್ತರಿಸಿತು. ಕಲ್ಲು ಕೆಳಗೆ ನೆಲದ ಮೇಲೆ ಬಿತ್ತು. ಯಾರಿಗೂ ಕಾಣದಂತೆ ಕಲ್ಲನ್ನು ಬಾಗಿಲಿನ ಬಳಿಗೆ ಎಳೆದುತಂದಿತು. ಅಷ್ಟರಲ್ಲಿ ಅದು ಬಳಲಿಹೋಯಿತು ಮತ್ತು ಕತ್ತೆಯೊಡನೆ ಹೇಳಿತು. "ನಿನ್ನ ಕಾಲನ್ನು ಒಳಗೆ ತುರುಕಿಸು ಮತ್ತು ಮೇಲಕ್ಕೆತ್ತು." ಕತ್ತೆಯು ಹಾಗೆ ಮಾಡಿತು ಮತ್ತು ಕಲ್ಲನ್ನು ಹೊರಕ್ಕೆ ಎಳೆಯಿತು. ಹೀಗೆ ಕಲ್ಲಿನೊಂದಿಗೆ ಕತ್ತೆಯೂ ಇಲಿಯೂ ದಡದ ಬಳಿಗೆ ಬಂದವು. ಕತ್ತೆಯು, "ನಾವು ಪೆಟ್ಟಿಗೆಯಿದ್ದಲ್ಲಿಗೆ ಹೇಗೆ ಹೋಗಬಹುದು?" ಎಂದಿತು. ಕರಡಿಯು, "ಅದು ಬಹಳ ಸುಲಭ; ನನಗೆ ಈಜಲು ಗೊತ್ತಿದೆ. ಮುಂದಿನ ಕಾಲುಗಳನ್ನು ನನ್ನ ಹೆಗಲ ಮೇಲಿಡು. ಕಲ್ಲನ್ನು ಗಟ್ಟಿಯಾಗಿ ಬಾಯಿಯಿಂದ ಕಚ್ಚಿಕೊಳ್ಳು. ಇಲಿಯು ನನ್ನ ಕಿವಿಯಲ್ಲಿ ಕೂತುಕೊಳ್ಳಬಹುದು" ಎಂದಿತು.

ಹೀಗೆ ನಿಶ್ಚಯಿಸಿ ಅವುಗಳು ಈಜಿಕೊಂಡು ಹೋದುವು. ಕರಡಿಯು ಜಂಬಕೊಚ್ಚಿ ಹೊಗಳಿಕೊಳ್ಳುತ್ತಾ, "ನಾವು ಎಷ್ಟು ಬಲಿಷ್ಠರು. ಅಲ್ಲವೆ? ನೀನು ಹೇಗೆ ಗ್ರಹಿಸುತ್ತಿ?" ಎಂದು ಕತ್ತೆಯೊಡನೆ ಕೇಳಿತು. ಕತ್ತೆಯು ಮಾತಾಡದಿರಲು, ನೀನು, "ನನ್ನೊಡನೆ ಏನು ಮಾತಾಡುವುದಿಲ್ಲ? ನನ್ನ ಪ್ರಶ್ನೆಗೆ ಉತ್ತರ ಕೊಡದಿರಲು ಎಷ್ಟು ದುರ್ಗುಣತೆಯುಳ್ಳ ಪ್ರಾಣಿಯಾಗಿದ್ದಿ" ಎಂದಿತು. ಆಗ ಕತ್ತೆಯು ತನ್ನ ಬಾಯಿಯೊಡೆದು ಕಲ್ಲನ್ನು ಕೆಳಕ್ಕೆ ಬಿಟ್ಟು "ನನಗೆ ಮಾತಾಡಲಿಕ್ಕೆ ಸಾಧ್ಯವಾಗಲಿಲ್ಲ. ನನ್ನ ಬಾಯಿಯಲ್ಲಿ ಕಲ್ಲನ್ನು ಕಚ್ಚಿಕೊಂಡಿರುವೆನೆಂದು ಗೊತ್ತಿರಲಿಲ್ಲವೆ? ಕಲ್ಲು ಕೆಳಗೆ ಬಿತ್ತು. ಇದು ನಿನ್ನ ತಪ್ಪು." ಎಂದಿತು. ಕರಡಿಯು, "ನಾಲಗೆಯನ್ನು ಗಟ್ಟಿ ಹಿಡಿದು ಮಾತಾಡದಿರು. ಏನು ಮಾಡಬೇಕೆಂದು ಆಲೋಚಿಸುವ." ಎಂದಿತು.

ಒಟ್ಟು ಕೂಡಿ ಆಲೋಚಿಸಿದುವು. ನೀರಿನಲ್ಲಿರುವ ಕಪ್ಪೆಗಳನ್ನೂ ಅವುಗಳ ಹೆಂಡತಿ, ಕುಟುಂಬ, ಸಂಬಂಧಿಕರು ಮತ್ತು ಮಿತ್ರರನ್ನೂ ಕರೆದು,

"ದೊಡ್ಡ ವೈರಿಯು ಬಂದು ನಿಮ್ಮನ್ನೆಲ್ಲಾ ತಿನ್ನಬಹುದು. ಹೆದರಬೇಡಿ. ನೀರಿನಲ್ಲಿರುವ ಕಲ್ಲುಗಳನ್ನೆಲ್ಲಾ ತಂದು ನಿಮ್ಮನ್ನು ಕಾಯಲು ದೊಡ್ಡ ಕೋಟೆಯನ್ನು ಕಟ್ಟಿ," ಎಂದುವು. ಅವುಗಳು ಬಹಳ ಭಯಪಟ್ಟು ತಮಗೆ ತೋರಿದ ಕಲ್ಲುಗಳನ್ನು ತಂದವು. ಕಡೆಗೆ ಒಂದು ದೊಡ್ಡ ಕಪ್ಪೆಯು ರೇಶಿಮೆ ನೂಲಿರುವ ಕಲ್ಲನ್ನು ತಂದಿತು. ಕರಡಿಯು ಅದನ್ನು ನೋಡಿ ಸಂತೋಷದಿಂದ ಹಾರಾಡಿತು ಮತ್ತು ಹೇಳಿತು, "ಈಗ ನಮಗೆ ಬೇಕಾದ್ದು ಸಿಕ್ಕಿತು." ನಂತರ ಕಪ್ಪೆಯು ಹೊರಿಯನ್ನು ತೆಗೆದುಕೊಂಡು, "ಇನ್ನು ಅವುಗಳು ತಮ್ಮಷ್ಟಕ್ಕೇ ಹೋಗಬಹುದು" ಎಂದಿತು.

ಆನಂತರ ಮೂರು ಮಿತ್ರರು ಪೆಟ್ಟಿಗೆಯ ಒಳಗೆ ಈಜಿಕೊಂಡು ಬಂದುವು. ಮುಚ್ಚಳವು ತೆರಿಯಲ್ಪಟ್ಟಿತು, ಅಷ್ಟರಲ್ಲೇ ಬ್ರೆಡ್ಡು ಮತ್ತು ನೀರು ಮುಗಿದಿದ್ದುವು. ಅವುಗಳು ಸಮಯಕ್ಕೆ ಸರಿಯಾಗಿ ಬಂದು ಮುಟ್ಟಿದ್ದುವು. ಪ್ರಯಾಣಿಕನು ಕಲ್ಲು ತನ್ನ ಕೈಗೆಸಿಕ್ಕಿದ ಕೂಡಲೇ ಅರಮನೆಯಲ್ಲಿರಲು ಗ್ರಹಿಸಿದನು. ಕ್ಷಣದಲ್ಲೇ ಅಲ್ಲಿ ಅರಮನೆಯಲ್ಲಿ ಸುರಕ್ಷಿತವಾಗಿ ಇರಿಸಲ್ಪಟ್ಟನು ಮತ್ತು ಕುದುರೆಯ ಲಾಯ ಮತ್ತು ಕುದುರೆಗಳನ್ನು ಕಂಡನು; ಮತ್ತು ಮೂವರು ಮಿತ್ರರು ಅವನೊಂದಿಗೆ ಇದ್ದುವು. ಅವರೆಲ್ಲಾ ತಮ್ಮ ಅಂತ್ಯದ ತನಕ ಒಟ್ಟಿಗೆ ತಮ್ಮ ಸಮಯವನ್ನು ಸಂತೋಷದಿಂದಲೂ ಉತ್ಸಾಹದಿಂದಲೂ ಕಳೆದರು.

೩. ಉತ್ಸಾಹಿ ಸಂಗೀತಗಾರ

ಒಬ್ಬ ಉತ್ಸಾಹಿ ಸಂಗೀತಗಾರ ಹೃದಯಂಗಮವಾಗಿ ಪಿಟೀಲು ಬಾರಿಸುತ್ತ ಉಲ್ಲಾಸಚಿತ್ತನಾಗಿ ಗುಡ್ಡದಲ್ಲಿ ಅಲೆದಾಡುತ್ತಿದ್ದನು ನಂತರ ತನ್ನಲ್ಲೇ ಹೀಗೆ ಹೇಳಿದನು: "ಸಮಯವು ಬಹಳ ಕಷ್ಟದಲ್ಲಿ ಕಳೆದುಹೋಗುತ್ತಿರುವುದು. ನಾನು ಒಬ್ಬ ಜೊತೆಗಾರನನ್ನು ಹುಡುಕಬೇಕು." ಆಮೇಲೆ ತನ್ನ ಪಿಟೀಲನ್ನು ಪುನಃ ಗುಡ್ಡವಿಡೀ ಪುನರ್ಧ್ವನಿಗೊಡುವಂತೆ ಬಾರಿಸಿದನು.

ಆಗ ಒಂದು ತೋಳವು ಬಂತು. "ಸರಿ, ಒಂದು ತೋಳವು ನನ್ನನ್ನು ನೋಡಲು ಬರುವುದು," ಎಂದನು ಉತ್ಸಾಹಿ ಸಂಗೀತಗಾರ. ತೋಳವು ಹತ್ತಿರಕ್ಕೆ ಬಂದು, "ನಿಮ್ಮ ಸಂಗೀತ ಬಹಳ ಚೆನ್ನಾಗಿ ಇದೆ. ನನಗೆ ಕಲಿಸುವಿಯೊ," ಎಂದು ಕೇಳಿತು. "ಸುಲಭದಲ್ಲಿ ಕಲಿಸಬಹುದು; ನಾನು ಹೇಳಿದಂತೆ ಮಾತ್ರ ಕೇಳಬೇಕು," ಎಂದನು. "ಸರಿ; ನಾನು ದೊಡ್ಡ ವಿದ್ವಾಂಸನಾಗುವೆನು," ತೋಳವೆಂದಿತು. ಹಾಗೆ ಮುಂದಕ್ಕೆ ಬರಲು ಒಂದು ಗೋಳಿ ಮರವು ಕಾಣಸಿಕ್ಕಿತು. ಅದರ ಮಧ್ಯದಲ್ಲಿ ಒಂದು ಪೊಟರೆಯಿತ್ತು; ಮತ್ತು ಒಂದು ಬಿರುಕು ಇತ್ತು. ಸಂಗೀತಗಾರನು ತೋಳವನ್ನು ಕರೆದು, "ನಿನಗೆ ಸಂಗೀತ ಕಲಿಯಬೇಕೆಂದಿದ್ದರೆ, ನೋಡು ನಿನ್ನ ಮುಂಗಾಲುಗಳನ್ನು ಬಿರುಕಿಗೆ ತುರುಕಿಸು," ಎಂದನು ತೋಳವು ಹಾಗೆ ಮಾಡಿತು. ಸಂಗೀತಗಾರನು ಅದರ ಮುಂಗಾಲುಗಳನ್ನು ಬಿರುಕಿಗೆ ಸರಿಯಾಗುವಂತೆ ಒಳಕ್ಕೆ ದೂಡಿ ಒಂದು ದೊಡ್ಡ ಕಲ್ಲನ್ನು ತುರುಕಿ, "ನಾನು ಹಿಂದಿರುಗುವತನಕ ಇಲ್ಲೇ ಕಾದುಕೊಂಡಿರುವವನಾಗು," ಎಂದು ತನ್ನ ದಾರಿಯಲ್ಲಿ ಮೆಲ್ಲನೆ ಮುಂದೆ ನಡೆದನು.

ಸ್ವಲ್ಪ ಸಮಯದ ನಂತರ, "ಸಮಯವು ಬಹಳ ಕಷ್ಟದಲ್ಲಿ ಕಳೆದು ಹೋಗುವುದು. ನಾನು ಒಬ್ಬ ಜೊತೆಗಾರನನ್ನು ಹುಡುಕಬೇಕು," ಎಂದು ಹೇಳಿ ತನ್ನ ಪಿಟೀಲನ್ನು ಬಾರಿಸಿ ಗುಡ್ಡೆಯು ಧ್ವನಿಗೊಡುವಂತೆ ಮಾಡಿದನು. ಆಗ ಒಂದು ನರಿಯು ಹತ್ತಿರಕ್ಕೆ ಬಂದು, "ನಿನ್ನ ಸಂಗೀತ ಬಹಳ ಚೆನ್ನಾಗಿದೆ. ನನಗೆ ಕಲಿಸುವಿಯಾದರೆ ನೀನು ಹೇಳಿದಂತೆ ಕೇಳುವೆನು," ಎಂದಿತು. "ನಾನೆಂದಂತೆ ಮಾಡು, ನಿನಗೆ ಚೆನ್ನಾಗಿ ಸಂಗೀತ ಬರುವುದು," ಎಂದು ಸಂಗೀತಗಾರನು ದಾರಿಯ ಬದಿಯಲ್ಲಿರುವ ಬಿದಿರಿನ ಪೊದರಿನಿಂದ ಒಂದನ್ನು

ಬಗ್ಗಿಸಿ ಒಂದು ತುದಿಯನ್ನು ತನ್ನ ಕಾಲ ಅಡಿಯಲ್ಲಿ ಇರಿಸಿ ಮತ್ತೊಂದನ್ನು ಬಗ್ಗಿಸಿ ನರಿಯೊಡನೆ ಹತ್ತಿರಕ್ಕೆ ಬರಲು ಹೇಳಿ, "ನಿನ್ನ ಕೈಯನ್ನು ಕೊಡು," ಎಂದನು. ನರಿಯು ಹಾಗೆ ಮಾಡಿತು. ಒಂದು ಕೈಯನ್ನು ಒಂದು ಬಿದಿರಿನ ತುದಿಗೂ ಮತ್ತೊಂದು ಕೈಯನ್ನು ಕೊಡೆಂದು ಹೇಳಿ, ಇನ್ನೊಂದು ಬಿದಿರಿನ ತುದಿಗೆ ಕಟ್ಟಿ, ಎರಡನ್ನೂ ಬಿಟ್ಟನು. ನರಿಯು ಅತ್ತಿಂದಿತ್ತ ಎಳೆಯಲ್ಪಟ್ಟು ಹಾರಾಡುತ್ತಾ ಆಕಾಶಕ್ಕೆ ಮುಟ್ಟಿತು. "ನಾನು ಹಿಂತಿರುಗಿ ಬರುವ ತನಕ ಇಲ್ಲೇ ಇರು," ಎಂದು ಸಂಗೀತಗಾರನು ಮುಂದಕ್ಕೆ ಮೆಲ್ಲನೆ ನಡೆಯುತ್ತಾ ಹೋದನು.

ಆದರೆ ಸ್ವಲ್ಪ ಸಮಯದಲ್ಲೇ ತನ್ನಲ್ಲೇ ಎಂದುಕೊಂಡನು: "ಸಮಯವು ಬಹಳ ಕಷ್ಟದಲ್ಲಿ ಕಳೆದು ಹೋಗುವುದು. ನಾನು ಒಬ್ಬ ಜೊತೆಗಾರನನ್ನು ಹುಡುಕಬೇಕು." ತನ್ನ ಪಿಟೀಲನ್ನು ತೆಗೆದು ಬಹಳ ಭಕ್ತಿಯಿಂದ ಬಾರಿಸಿದನು. ಆಗ ಒಂದು ಮೊಲವು ಅವನ ಒಳಿಗೆ ಬಂದು, "ನೀನು ಬಹಳ ಅಂದವಾಗಿ ಪಿಟೀಲು ಬಾರಿಸುತ್ತಿ, ನನಗೆ ಕಲಿಸುವಿಯೊ?" ಎಂದು ಕೇಳಿತು. "ನಾನು ಹೇಳಿದಂತೆ ಕೇಳುವಿಯಾದರೆ ನಿನಗೆ ಕಲಿಸುವೆನು," ಎಂದು ಸಂಗೀತಗಾರನು ಹೇಳಿದನು. "ಸರಿ; ನಾನು ದೊಡ್ಡ ವಿದ್ವಾಂಸನಾಗುವೆನು," ಎಂದು ಮೊಲವು ಹೇಳಲು, ಸಂಗೀತಗಾರನು ಒಂದು ಹಗ್ಗವನ್ನು ಮೊಲದ ಕುತ್ತಿಗೆಗೆ ಸಿಲುಕಿಸಿ ಒಂದು ಮರಕ್ಕೆ ಕಟ್ಟಿ "ಬೇಗನೆ ಹಾರು; ತಿರುಗು; ಈ ಮರಕ್ಕೆ ಇಪ್ಪತ್ತು ಸುತ್ತು ಬಾ," ಎಂದನು. ಮೊಲವು ಅವನೆಂದಂತೆ ಬಹಳ ವೇಗದಲ್ಲಿ ಇಪ್ಪತ್ತು ಸುತ್ತು ತಿರುಗಿತು. ಹೀಗೆ ಅದರ ಕುತ್ತಿಗೆಯು ಕಾದು ಮತ್ತೂ ಅತ್ತಿತ್ತ ಹಾರುತ್ತ ಎಳೆದಾಡಲು ಪ್ರಾರಂಭಿಸಲು ಅದರ ಕುತ್ತಿಗೆ ಮತ್ತೂ ಕಾದುಹೋಯಿತು. ಸಂಗೀತಗಾರನು, "ನಾನು ಹಿಂದಕ್ಕೆ ಬರುವ ವರೆಗೆ ನೀನು ನಿರೀಕ್ಷಿಸುತ್ತಿರು," ಎಂದನು.

ಆದರೆ ತೋಳವು ಹೇಗಾದರೂ ಕಡೆಗೆ ಕಲ್ಲನ್ನು ಕಚ್ಚಿ ಹೊರಗೆ ಎಳೆದು ತನ್ನ ಕಾಲುಗಳನ್ನು ಹೊರಕ್ಕೆ ತೆಗೆದು ಸ್ವಾತಂತ್ರ್ಯ ಹೊಂದಿತು. ಸಂಗೀತಗಾರನೊಡನೆ ಬಹಳ ಕೋಪಗೊಂಡು, "ಆತನನ್ನು ಈಗಲೇ ಕೊಂದು ಬಿಡುವೆನು," ಹೀಗೆ ತನ್ನಲ್ಲೇ ಹೇಳುತ್ತ ಓಡುತ್ತ ಬಂತು. ಆಗ ನರಿಯು ಅದನ್ನು ಕರೆದು, "ನನ್ನನ್ನು ಹಿಬ್ಬ ಸಂಗೀತಗಾರನು ತಂತ್ರ ಹೂಡಿ ಇಲ್ಲಿ ಕಟ್ಟಿಬಿಟ್ಟನು. ನನ್ನನ್ನು ಬಿಡಿಸಲು ಪ್ರಾರ್ಥಿಸುವೆನು," ಎಂದಿತು. ತೋಳವು ಬಿದಿರಿನ ಬುಡವನ್ನು ಕಚ್ಚಿ ತುಂಡು ಮಾಡಲು ನರಿಯು ಕೆಳಕ್ಕೆ ಬಂತು. ನಂತರ

ಅವುಗಳೆರಡೂ ಮಿತ್ರತ್ವದಿಂದ ಒಟ್ಟಿಗೆ ಸಂಗೀತಗಾರನನ್ನು ಹುಡುಕಲು ಹೊರಟುವು. ಮೊಲವು ಅವುಗಳನ್ನು ನೋಡಿ ಸಹಾಯ ಮಾಡಲು ಕರೆಯಿತು. ಮೊಲದ ಬಳಿಗೆ ಬಂದು ಅದನ್ನು ಬಿಡಿಸಿದ ನಂತರ ತಮ್ಮ ವೈರಿಯನ್ನು ಹಿಂಬಾಲಿಸಿದುವು.

ಹೀಗಿರಲು ಸಂಗೀತಗಾರನು ತನ್ನ ಪಿಟೀಲನ್ನು ಬಾರಿಸುತ್ತಿದ್ದನು. ಆಗ ಇನ್ನೊಬ್ಬ ಜೊತೆಗಾರನನ್ನೂ ನೋಡಿದನು. ಒಬ್ಬ ಬಡ ಕಟ್ಟಿಗೆ ಒಡೆಯುವವನು ತನ್ನ ಕಂಕುಳಲ್ಲಿ ಒಂದು ಕೊಡಲಿಯೊಂದಿಗೆ ಅವನ ಸಂಗೀತವನ್ನು ಕೇಳಿ ಅವನನ್ನು ಹಿಂಬಾಲಿಸಿದನು. ಅವನು ಉತ್ತಮ ಜೊತೆಗಾರನೆಂದು ಗ್ರಹಿಸಿ ಅವನೊಂದಿಗೆ ತನ್ನ ತಂತ್ರವನ್ನು ಅಡದೆ ಬಹಳ ಉತ್ತಮ ಸಂಗೀತವನ್ನು ಬಾರಿಸಿ ತೋರಿಸಲು ಅವನ ಹೃದಯ ಅದರೆಡೆಗೆ ಸೆಳೆಯಿತು ಮತ್ತು ಅವನು ಬಹಳ ಸಂತೋಷಗೊಂಡನು.

ಕಟ್ಟಿಗೆ ಒಡೆಯುವವನು ಸಂಗೀತವನ್ನು ಕೇಳುತ್ತ ನಿಂತಿರಲು ಸಿಟ್ಟುಗೊಂಡು ತೋಳ, ನರಿ ಮತ್ತು ಮೊಲ ಏನಾದರೂ ತೊಂದರೆ ಕೊಡಲು ಅಲ್ಲಿಗೆ ಬರುವುದನ್ನು ನೋಡಿದನು. ತನ್ನ ಮಹತ್ವದ ಕೊಡಲಿಯೊಂದಿಗೆ, ತನ್ನಲ್ಲಿ ಈ ಕೊಡಲಿಯಿರುವ ತನಕ ಯಾರೊಬ್ಬನೂ ತೊಂದರೆ ಕೊಡಲಾರನು ಎನ್ನುವಂತೆ ನಿಂತನು. ಇದನ್ನು ನೋಡಿ ಆ ಪ್ರಾಣಿಗಳು ಹೆದರಿ ಗುಡ್ಡಕ್ಕೆ ಓಡಿಹೋದುವು. ನಂತರ ಕಟ್ಟಿಗೆ ಒಡೆಯುವವನ ಮುಂದೆ ಅವನ ಕಷ್ಟವು ತೊಲಗುವಂತೆ ತನ್ನ ಸಂಗೀತದಲ್ಲಿ ಅತ್ಯುತ್ತಮವಾದುದನ್ನು ಬಾರಿಸಿ ಅಲ್ಲಿಂದ ಮುಂದಕ್ಕೆ ಪ್ರಯಾಣ ಬೆಳೆಸಿದನು.

೪. ರಾಣಿ ಜೇನು ನೊಣ

ಒಬ್ಬ ರಾಜನ ಮಕ್ಕಳು ತಮ್ಮ ಜೀವನವನ್ನು ಹುಡುಕಲು ದೂರ ಪ್ರದೇಶಕ್ಕೆ ತೆರಳಿದರು. ತಮ್ಮ ಮೂರ್ಖತ್ವದ ಜೀವನದಿಂದ ಅವರಿಗೆ ನಂತರ ಹಿಂದಕ್ಕೆ ಬರಲು ಸಾಧ್ಯವಾಗಲಿಲ್ಲ. ಆಗ ಅವರ ಗಿಡ್ಡನಾಗಿರುವ ಚಿಕ್ಕ ತಮ್ಮನು ಹೊರಟು ಅವರನ್ನು ಕಂಡನು, ಅವರು ಅವನನ್ನು ನೋಡಿ ಇಷ್ಟು ಚಿಕ್ಕನಾಗಿರುವ, ಸಾಮಾನ್ಯನಾಗಿರುವ ತಮ್ಮನು ಪ್ರಪಂಚವನ್ನು ತಿರುಗಾಡಲು ತಮ್ಮಿಂದ ಅಸಾಧ್ಯವಾಗಿರುವ ಕೆಲಸವನ್ನು ಮಾಡಲು ಜಯಕಾರಿಯಾಗುವುದು ಹೇಗೆಂದು ಗ್ರಹಿಸಿ ನಗಾಡಿದರು. ಅಂತೂ ಅವರೆಲ್ಲರೂ ಹೊರಟು ಪ್ರಯಾಣಿಸಲು ಒಂದು ಕಡೆಯಲ್ಲಿ ಒಂದು ಇರುವೆಗಳ ಪುಂಜವನ್ನು ನೋಡಿದರು. ಮೊದಲಿನ ಇಬ್ಬರು ಅಣ್ಣಂದಿರು ಅದನ್ನು ನೋಡಿ ಅದನ್ನು ಕಿತ್ತು ಇರುವೆಗಳು ತಮ್ಮ ತತ್ತಿಗಳನ್ನು ಹೊತ್ತುಕೊಂಡು ಹೋಗುವುದನ್ನು ನೋಡಲು ಉತ್ಸುಕರಾದರು. ಆಗ ಗಿಡ್ಡ ತಮ್ಮನು, ಅವುಗಳು ತಮ್ಮಷ್ಟಕ್ಕೆ ಸುಖಪಡಲಿ. ಅವುಗಳಿಗೆ ಕಷ್ಟವನ್ನುಂಟುಮಾಡುವುದನ್ನು ನಾನು ಸಹಿಸುವುದಿಲ್ಲ" ಎಂದನು.

ಹೀಗೆ ಅವರ ಪ್ರಯಾಣವನ್ನು ಮುಂದರಿಸಲು ಅವರು ಒಂದು ಕೆರೆಯ ಬಳಿಗೆ ಬಂದರು. ಅಲ್ಲಿ ಹಲವು ಬಾತುಕೋಳಿಗಳು ಈಜುತ್ತಿದ್ದವು. ಆಗ ಮೊದಲಿನ ಇಬ್ಬರು ಅಣ್ಣತಮ್ಮಂದಿರು ಅವುಗಳಲ್ಲಿ ಎರಡನ್ನು ಹಿಡಿದು ಊಟಕ್ಕೆ ಬೇಯಿಸಬೇಕೆಂದು ಗ್ರಹಿಸಿದರು. ಆಗ ಗಿಡ್ಡ ತಮ್ಮನು, "ಅವುಗಳು ತಾವೇ ಸುಖಪಡಲಿ ಅವುಗಳನ್ನು ಕೊಲ್ಲುವುದನ್ನು ನಾನು ಸಹಿಸಲಾರೆ" ಎಂದನು. ಅವರು ಅಲ್ಲಿಂದ ಮುಂದೆ ನಡೆದು ಒಂದು ಜೇನು ನೊಣದ ಸಮೂಹವಿರುವ ಮರದ ಬುಡಕ್ಕೆ ಬಂದರು. ಮರದ ಒಂದು ಪೊಟರೆಯಿಂದ ಕೆಳಬದಿಯಲ್ಲಿ ಜೇನು ಹರಿಯುತ್ತಿರುವುದನ್ನು ನೋಡಿ ಮೊದಲಿನ ಅಣ್ಣತಮ್ಮಂದಿರಿಬ್ಬರು ಅದರ ಕೆಳಬದಿಯಿಂದ ಬೆಂಕಿ ಹಾಕಿ ಜೇನನ್ನು ತೆಗೆದು ತಿನ್ನಬೇಕೆಂದು ಗ್ರಹಿಸಿದರು. ಆಗ ಗಿಡ್ಡ ತಮ್ಮನು, "ಚಂದವಾದ ಹುಳಗಳು ತಾವೇ ಸುಖಪಟ್ಟುಕೊಂಡಿರಲಿ. ಅವುಗಳನ್ನು ಹೊತ್ತಿಸುವುದನ್ನು ನಾನು ಸಹಿಸಲಾರೆ" ಎಂದನು.

ಆ ಮೇಲೆ ಅವರು ಮೂವರು ಅಲ್ಲಿಂದ ನಡೆದು ಒಂದು ಕೋಟೆಯೊಳಗೆ ಬಂದರು. ಅಲ್ಲಿದ್ದ ಲಾಯದೊಳಗೆ ಹಾಲುಗಲ್ಲಿನಿಂದ ಕೆತ್ತಿದ ಕುದುರೆಗಳಿದ್ದವು. ಅಲ್ಲಿ ಯಾರೂ ಮನುಷ್ಯರಿರಲಿಲ್ಲ. ಮುಂದ ನಡೆಯುತ್ತಾ ಅರಮನೆಯ ಕೋಣೆಗಳನ್ನು ಸುತ್ತಾಡಲು ಒಂದು ಕೋಣೆಯ ಬಾಗಿಲಿನ ಬಳಿಗೆ ಬಂದು ಬೀಗದ ತೂತಿನ ಒಳಗಿಂದ ನೋಡಲು ಇನ್ನೊಂದು ಕೋಣೆಯಲ್ಲಿ ಒಬ್ಬ ಮುದುಕನು ಮೇಜಿನ ಬಳಿ ಕುಳಿತಿರುವುದನ್ನು ಕಂಡರು. ಒಂದೆರಡು ಸರ್ತಿ ಅವನನ್ನು ಕರೆದರು. ಅವನಿಗೆ ಕೇಳಲಿಲ್ಲ. ಮತ್ತೊಂದು ಸರ್ತಿ ಅವನನ್ನು ಕರೆಯಲು ಅವನು ಎದ್ದು ಹೊರಗೆ ಬಂದನು.

ಅವನು ಅವರನ್ನು ಒಂದು ಮೇಜಿನ ಬಳಿಗೆ ಒಯ್ದನು. ಮೇಜಿನ ಮೇಲೆ ಅನೇಕ ವಸ್ತುಗಳು ಇರಿಸಲ್ಪಟ್ಟಿದ್ದುವು. ಅವರು ತಮಗೆ ಬೇಕಾದಷ್ಟು ತಿಂದು, ಕುಡಿದಾದ ಮೇಲೆ ಅವರನ್ನು ಅವನು ಬೇರೆಬೇರೆ ಹಾಸಿಗೆಗಳಿರುವ ಕೋಣೆಗೆ ಕೊಂಡೊಯ್ದನು.

ಮರುದಿನ ಅವನು ಒಂದನೆಯವನನ್ನು ಕರೆದು ಹಾಲುಗಲ್ಲಿನ ಒಂದು ಮೇಜನ್ನು ತೋರಿಸಿ ಮೂರು ಸಣ್ಣ ಹಲಿಗೆಗಳನ್ನು ತೋರಿಸಿ ಓದಲು ಅವುಗಳಲ್ಲಿ ಕೋಟೆಯನ್ನು ಸ್ವಾಧೀನಪಡಿಸುವ ಉಪಾಯವನ್ನು ಬರೆದಿತ್ತು. 'ಅರಮನೆಯ ಹೊರಗೆ ನೆಲದ ಅಡಿಯಲ್ಲಿ ರಾಜನ ಮಗಳ ಸಾವಿರ ವಜ್ರಗಳಿವೆ. ಅವುಗಳನ್ನು ಒಂದೂ ಬಿಟ್ಟುಹೋಗದಂತೆ ಸೂರ್ಯನು ಅಸ್ತಮಿಸುವುದಕ್ಕಿಂತ ಮೊದಲು ತರಬೇಕು. ಅಲ್ಲವಾದರೆ ಅವನು ಹಾಲುಗಲ್ಲಿನ ಪ್ರತಿಮೆಯಾಗುವನು.' ಹೀಗೆ ಓದಲು ಹಿರಿಯ ಸಹೋದರನು ಅವುಗಳನ್ನು ಹುಡುಕಲು ಹೊರಟನು. ಅವನಿಂದ ಸೂರ್ಯನು ಆಸ್ತಮಿಸುವುದಕ್ಕಿಂತ ಮೊದಲು ಒಂದು ನೂರು ವಜ್ರಗಳನ್ನು ಹುಡುಕಲು ಸಾಧ್ಯವಾಗದಿರಲು ಕಲ್ಲಾಗಿ ಮಾರ್ಪಟ್ಟನು.

ಮರುದಿನ ಎರಡನೆಯವನು ಹೊರಟನು. ಅವನಿಂದ ಇನ್ನೂರು ವಜ್ರಗಳನ್ನು ಹುಡುಕಲು ಸಾಧ್ಯವಾಗದಿರಲು ಕಲ್ಲಾಗಿ ಮಾರ್ಪಟ್ಟನು.

ಕಡೆಗೆ ಗಿಡ್ಡ ತಮ್ಮನ ಸಮಯವು ಬಂತು. ಅವನು ಅವುಗಳಿದ್ದಲ್ಲಿಗೆ ಹೋಗಿ ವಜ್ರಗಳನ್ನು ಹುಡುಕಲು ಬಹಳ ಕಷ್ಟವೆಂದು ತಿಳಿದು ಒಂದು ಕಲ್ಲಿನ ಮೇಲೆ ಕುಳಿತು ಅಳಲು ಪ್ರಾರಂಭಿಸಿದನು. ಆಗ ತಾನು

ಸಹಾಯ ಮಾಡಿದ ಇರುವೆಗಳ ಪುಂಜದಿಂದ ಅವುಗಳ ರಾಜನು ಬಂದು ಸಹಾಯ ಮಾಡಲು ಪ್ರಾರಂಭಿಸಿತು. ಆ ಇರುವೆಗಳೆಲ್ಲಾ ಸೇರಿ ವಜ್ರಗಳನ್ನು ಹುಡುಕಿ ರಾಶಿ ಮಾಡಿದುವು.

ಎರಡನೆಯ ಹಲಿಗೆಯಲ್ಲಿ 'ಅರಸು ಕುಮಾರಿಯರ ಕೋಣೆಯ ಬೀಗದ ಕೈಯು ಒಂದು ಕೆರೆಯಲ್ಲಿದೆ. ಅದನ್ನು ಹುಡುಕಿ ತರಬೇಕು' ಎಂದು ಬರೆದಿತ್ತು. ಗಿಡ್ಡ ತಮ್ಮನು ಆ ಕೆರೆಯ ಒಳಗೆ ಬರಲು ತಾನು ಸಹಾಯ ಮಾಡಿದ ಎರಡು ಬಾತುಕೋಳಿಗಳು ಬಂದು ಕೆರೆಯಲ್ಲಿ ಮುಳುಗಿ ಬೀಗದ ಕೈಯನ್ನು ತಂದುಕೊಟ್ಟುವು.

ಮೂರನೆ ಕೆಲಸವು ಬಹಳ ಕಷ್ಟವಾಗಿತ್ತು. ಮೂವರು ರಾಜಕುಮಾರಿಯರಲ್ಲಿ ಚಿಕ್ಕವಳು ಮತ್ತು ಅತಿ ಉತ್ತಮಳಾಗಿರುವವಳನ್ನು ಹುಡುಕಬೇಕಾಗಿತ್ತು. ಅವರೆಲ್ಲರೂ ಚಂದವಿದ್ದು ಒಂದೇ ರೀತಿಯಾಗಿ ಕಾಣುತ್ತಿದ್ದರು. ಅವಳಲ್ಲಿ ಹಿರಿಯುವಳು ಸಕ್ಕರೆ ರವೆಯನ್ನೂ, ಎರಡನೆಯುವಳು ಸಿಹಿ ರವೆಯನ್ನೂ, ಮೂರನೆಯುವಳು ಒಂದು ಚಮಚೆ ಜೇನನ್ನೂ ಕುಡಿದಿರುವವರೆಂದು ಅವನಿಗೆ ಹೇಳಿದ್ದನು. ಜೇನನ್ನು ಕುಡಿದಿರುವವಳು ಯಾರೆಂದು ಅವನು ತಿಳಿಯಬೇಕಾಗಿತ್ತು.

ಆಗ ಜೇನು ನೊಣವು ಬಂದು ಹಾರಾಡಿ ಮೂವರ ತುಟಿಗಳನ್ನು ಪ್ರಯತ್ನಪಟ್ಟು ಚಿಕ್ಕ ರಾಜಕುಮಾರಿಯ ತುಟಿಯಲ್ಲಿ ಕೂತಿತು. ಗಿಡ್ಡ ತಮ್ಮನು ಹೀಗೆ ಜೇನು ಕುಡಿದ ಚಿಕ್ಕ ರಾಜಕುಮಾರಿ ಯಾರೆಂದು ತಿಳಿದನು. ಈ ರೀತಿ ಕೋಟೆಯನ್ನು ಗಿಡ್ಡ ತಮ್ಮನು ಪಡೆದನು. ನಂತರ ಅಲ್ಲಿ ಹಾಲುಗಲ್ಲಾಗಿ ಮಾರ್ಪಟ್ಟವರೆಲ್ಲರೂ ಎದ್ದು ತಮ್ಮ ಮೊದಲಿನ ರೂಪವನ್ನು ಹೊಂದಿದರು. ಗಿಡ್ಡ ತಮ್ಮನು ಅತಿ ಉತ್ತಮಳಾದ ಕಿರಿಯ ರಾಜಕುಮಾರಿಯನ್ನು ಮದುವೆಯಾದನು ಮತ್ತು ರಾಜನು ಸತ್ತನಂತರ ಆ ಅರಮನೆಯಲ್ಲಿ ರಾಜನಾದನು. ಅವನ ಇಬ್ಬರು ಅಣ್ಣಂದಿರು ಮತ್ತಿಬ್ಬರು ರಾಜಕುಮಾರಿಯರನ್ನು ಮದುವೆಯಾದರು.

೫. ನಾಲ್ವರು ಸಹೋದರರು

ಬಡತನದಿಂದ ಜೀವನ ನಡೆಸಲು ಅಸಮರ್ಥನಾದ ದೀನ ದಯಾಳುವೊಬ್ಬನು ಒಂದು ದಿನ ತನ್ನ ನಾಲ್ವರು ಮಕ್ಕಳನ್ನು ಕರೆದು, "ನಾನು ದರಿದ್ರನು; ನಿಮಗೆ ಕೊಡಲು ನನ್ನಲ್ಲಿ ಏನೂ ಇಲ್ಲ. ಇನ್ನು ನೀವು ನಿಮ್ಮ ಜೀವನ ಸಾಗಿಸಲು ದೇಶಾಂತರಕ್ಕೆ ಹೋಗಬೇಕು. ಏನಾದರೂ ವಿದ್ಯೆಯನ್ನು ಕಲಿತು ನಿಮ್ಮ ಹಾದಿ ಹಿಡಿಯಿರಿ," ಎಂದನು.

ಹೀಗೆ ನಾಲ್ವರು ಸಹೋದರರು ತಮ್ಮ ತಂದೆಗೆ ನಮಸ್ಕರಿಸಿ ಅಂಗಿ ಅರಿವೆಗಳನ್ನು ಗಂಟುಮೂಟೆ ಕಟ್ಟಿಕೊಂಡು ಮನೆಯಿಂದ ಹೊರಟರು. ಸ್ವಲ್ಪದೂರ ಹೋಗುವಷ್ಟರಲ್ಲಿ ಚತುರ್ಮುಖವಾಗಿ ನಾಲ್ಕು ದಿಕ್ಕುಗಳಿಗೆ ಕವಲೊಡೆದು ನಾಲ್ಕು ಬೇರೆ ಬೇರೆ ಪ್ರದೇಶಗಳಿಗೆ ಹೋಗುವ ದಾರಿಗಳು ಕಂಡುವು. ಅಷ್ಟರಲ್ಲಿ ಹಿರಿಯ ಸಹೋದರನು, "ಇಲ್ಲಿಂದ ನಾವು ಬೇರೆ ಬೇರೆ ದಾರಿ ಹಿಡಿದು ನಾಲ್ಕು ವರ್ಷಗಳಲ್ಲಿ ಪುನಃ ಇಲ್ಲಿಗೆ ಬಂದು ಕೂಡಬೇಕು. ಆಗ ಏನಾದರೂ ಸಂಪಾದಿಸಿಕೊಂಡು ಬರಬೇಕು ಮತ್ತು ಜೀವನ ನಡೆಸಲು ಪ್ರತಿಯೊಬ್ಬನೂ ಸಮರ್ಥನಾಗಬೇಕು," ಎಂದನು. ನಾಲ್ವರೂ ಆನಂತರ ಬೇರೆ ಬೇರೆ ದಿಕ್ಕಿಗೆ ಹೊರಟು ಹೋದರು.

ಹಿರಿಯ ಸಹೋದರನು ಅಲ್ಲಿಂದ ಸ್ವಲ್ಪ ದೂರ ಹೋಗುವಷ್ಟರಲ್ಲೇ ಒಬ್ಬ ಆಗಂತುಕನು ಕಾಣಸಿಕ್ಕಿ, "ನೀನು ಯಾಕಾಗಿ ಇಷ್ಟು ಅವಸರದಲ್ಲಿ ಹೋಗುತ್ತಿರುವೆ? ನಿನಗೇನಾಗಬೇಕು?" ಎಂದು ಕೇಳಿದನು.

"ನಾನೂ ನನ್ನ ಜೀವನೋಪಾಯಕ್ಕಾಗಿ ಏನಾದರೂ ವಿದ್ಯೆಯನ್ನು ಕಲಿಯಲು ಹೊರಟಿರುವೆನು," ಎಂದು ಹಿರಿಯ ಸಹೋದರನು ಉತ್ತರವೀಯಲು ಆಗಂತುಕನು, "ನಿನಗೆ ಒಳ್ಳೆಯ ಉಪಾಯ ಕಲಿಸಿ ಕೊಡುವೆನು. ನಾನು ಹೇಳಿದಂತೆ ಕೇಳು. ಬಹಳ ಚುರುಕಿನ ಕಳ್ಳನಾಗಲು ಕಲಿಸಿಕೊಡುವೆನು," ಎಂದನು. ಇದನ್ನು ಕೇಳಿ ಹಿರಿಯ ಮಗನು ಚಕಿತನಾಗಿ, ಅದನ್ನು ನಿರಾಕರಿಸಲು, ಆಗಂತುಕನು ಅವನನ್ನು ಸಮಾಧಾನ ಪಡಿಸಲು ಉದ್ಯುಕ್ತನಾದನು. "ನೀನು ಜೈಲಿನ ಬೆದರಿಕೆಯನ್ನು ಬಿಟ್ಟುಬಿಡು; ನೀನು ಕದ್ದುಕೊಳ್ಳುವಾಗ ಯಾರೂ ನಿನ್ನನ್ನು ನೋಡಲಾರರು. ಅದು ಯಾರಿಗೂ ತಿಳಿಯಲಾರದು ಮತ್ತು ಯಾರಿಗೂ ನಿನ್ನ ಮೇಲೆ ಸಂಶಯ ಹುಟ್ಟಲಾರದು."

ಆಗಂತುಕನಿಂದ ತರುವಾಯ ಹಿರಿಯ ಸಹೋದರನು ಅವನು ಹೇಳಿದ್ದಕ್ಕೆ ಒಪ್ಪಿದನು. ಕಿಂಚಿತ್ ಸಮಯದಲ್ಲೇ ಕಳ್ಳತನದ ವಿದ್ಯೆಯನ್ನು ಅವನಿಂದ ಕಲಿತನು.

ಎರಡನೆಯವನೂ ಒಬ್ಬ ಆಗಂತುಕ ವ್ಯಕ್ತಿಯನ್ನು ಸಂಧಿಸಿದನು. ಆ ವ್ಯಕ್ತಿಯು ಇವನನ್ನು ಕುರಿತು, "ನೀನು ಎಲ್ಲಿಗೆ ಹೋಗುತ್ತಿರುವೆ," ಎಂದು ಕೇಳಲು ಮೊದಲಿನವನಂತೆಯೇ ಎರಡನೆಯವನೂ, "ನಾನು ಜೀವನೋಪಾಯಕ್ಕಾಗಿ ಏನಾದರೂ ಉದ್ಯೋಗ ಹುಡುಕಿಕೊಂಡು ಹೋಗುತ್ತಿರುವೆನು," ಎಂದನು. ಅಷ್ಟರಲ್ಲೇ ಆಗಂತುಕನು, "ನಿನಗೆ ಇಷ್ಟವಿದ್ದರೆ ನಕ್ಷತ್ರಗಳನ್ನು ನೋಡಿ ತಿಳಿದುಕೊಳ್ಳುವ ವಿದ್ಯೆಯನ್ನು ಕಲಿಸುವೆನು. ಅದರಿಂದ ನಿನಗೆ ಎಲ್ಲಾ ಸ್ಥಳಗಳನ್ನೂ ಹುಡುಕಬಹುದಾಗುತ್ತದೆ." ಎಂದನು. ಅನಂತರ ಇದಕ್ಕೊಪ್ಪಿ ಬಹಳ ಸಂತೋಷದಿಂದ ನಕ್ಷತ್ರ ನಿರೀಕ್ಷಣಾ ವಿದ್ಯೆಯನ್ನು ಕಲಿತುಕೊಂಡನು. ಆಗಂತುಕನು ತನ್ನ ಕೈಯಲ್ಲಿದ್ದ ಕನ್ನಡಿಯ ಮೂಲಕ ಈ ವಿದ್ಯೆಯನ್ನು ಕಲಿಸಿ ಅದನ್ನು ಇವನಿಗೆ ಕೊಟ್ಟು, "ಈ ಕನ್ನಡಿಯ ಮೂಲಕ ಆಕಾಶದಲ್ಲಿಯೂ ನೆಲದಮೇಲೂ ಏನೇನು ಇವೆ, ಏನೇನು ಸಂಭವಿಸುವುದು ಎಂದು ನೋಡಿಕೊಳ್ಳಲು ಅರ್ಹನಾಗುವಿ. ನಿನ್ನ ನಿರೀಕ್ಷೆಯಿಂದ ಏನೊಂದೂ ಮರೆಯಾಗಿರಲಾರದು," ಎಂದು ಹೊರಟು ಹೋದನು.

ಮೂರನೆಯವನು ಒಬ್ಬ ಬೇಟೆಗಾರನನ್ನು ಭೇಟಿಯಾದನು. ಬೇಟೆಗಾರನು ಇವನನ್ನು ತನ್ನೊಂದಿಗೆ ಬರಹೇಳಿ ಬೇಟೆಯಾಡುವ ವಿದ್ಯೆಯನ್ನೆಲ್ಲಾ ಕಲಿಸಿಕೊಟ್ಟನು ಮತ್ತು ಅಲ್ಲಿಂದ ಹೊರಡುವಾಗ ಅವನಿಗೆ ಒಂದು ಬಿಲ್ಲನ್ನು ಕೊಟ್ಟು, "ನೀನು ಈ ಬಿಲ್ಲಿನ ಸಹಾಯಾದಿಂದ ಯಾವದನ್ನು ಗುರಿಯಿಟ್ಟು ಹೊಡೆಯುವಿಯೊ ಅದಕ್ಕೆ ತಾಗದೆ ಇರದು. ಮತ್ತು ಅದನ್ನು ನೀನು ಹೊಂದುವುದು ಖಂಡಿತ," ಎಂದನು. ಆನಂತರ ಈ ಮೂರನೆ ಸಹೋದರನು ತನ್ನ ಬಿಲ್ಲನ್ನು ತೆಗೆದುಕೊಂಡು ಅತಿಯಾದ ಸಂತೋಷಪಟ್ಟು ಅಲ್ಲಿಂದ ಹೊರಟನು.

ಕಿರಿಯ ಸಹೋದರನು ಅನೇಕ ದಿವಸಗಳಿಂದ ಅಲೆದಾಡುತ್ತಿರುವಾಗ, ಕಡೆಗೆ ಒಬ್ಬ ಅಪರಿಚಿತ ವ್ಯಕ್ತಿಯು ಕಾಣಸಿಕ್ಕಿ, "ನೀನು ಎಲ್ಲಿಗೆ ಹೋಗುವೆ? ನನ್ನಿಂದ ಏನಾದರೂ ಸಹಾಯವಾಗ ಬೇಕಿದ್ದರೆ ಹೇಳು. ನೀನು ಹೊಲಿಗೆ ಕೆಲಸ ಮಾಡುವ ದರ್ಜಿಯಾಗಲು ಇಚ್ಛಿಸುವುದಿಲ್ಲವೆ? ನನಗೆ ಆ ಕೆಲಸ

ಗೊತ್ತಿದೆ. ನಿನಗೆ ಅದನ್ನು ಕಲಿಸುವೆನು. ನಿನ್ನ ಜೀವನೋಪಾಯವು ಅದ
ರಿಂದ ಸಾಗುವುದು," "ಎನಲು ಕಿರಿಯವನು," ದರ್ಜಿಕೆಲಸವೊ! ನನ್ನಿಂದಾ
ಗದು. ಬೆಳಗ್ಗಿಂದ ಸಂಜೆಯ ತನಕ ಮೊಣಕಾಲು ಮಡಚಿ ಕುಳಿತು
ಕೊಂಡು ಸೂಜಿನೂಲಿನಲ್ಲಿ ಕೆಲಸಮಾಡಲು ನನ್ನಿಂದ ಅಸಾಧ್ಯ," ಎಂದನು.
ಅವನಿಗೆ ಪುನಃ ಅಪರಿಚಿತ ವ್ಯಕ್ತಿಯು. "ನೀನು ತಿಳಿದಿರುವಂತೆ ಅದೇನು
ಕಷ್ಟತರದ ವಿದ್ಯೆಯಲ್ಲ. ನನ್ನ ಹೊಲಿಗೆ ಕ್ರಮ ಬಹಳ ಸುಲಭವಾಗಿದೆ.
ಅದು ಬೇರೊಂದು ರೀತಿಯಾಗಿದೆ," ಎಂದನು. ಇದನ್ನು ತಿಳಿದುಕೊಳ್ಳಲು
ಈಗ ಆತುರದಿಂದ ನಾಲ್ಕನೆಯ ಸಹೋದರನು ಒಪ್ಪಿಗೆಯಿತ್ತು ಕಲಿಯಲು
ಪ್ರಾರಂಭಿಸಿದನು. ಕಡೆಗೆ ಅಪರಿಚಿತ ವ್ಯಕ್ತಿಯು ಹೊರಡುವಾಗ ಇವನಿಗೆ
ಒಂದು ಸೂಜಿಯನ್ನು ಕೊಟ್ಟು "ಈ ಸೂಜಿಯ ಸಹಾಯದಿಂದ ನೀನು
ಎಂತಹ ವಸ್ತುವನ್ನಾದರೂ ಹೊಲಿಯಬಹುದಾಗಿದೆ. ಮೊಟ್ಟೆಯಂತಹ
ಮೆತ್ತಗಿನ ವಸ್ತುವನ್ನೂ ಕಬ್ಬಿಣದಂತಹ ಗಟ್ಟಿಯಾದ ವಸ್ತುವನ್ನೂ, ಬಿರುಕು,
ಸೆರಿಗಳು ಕಾಣದಂತೆ ಮೊದಲಿನಂತೆಯೇ ಒಟ್ಟು ಕೂಡಿಸಿ ಹೊಲಿಯ
ಬಹುದು," ಎಂದನು. ಸೂಜಿಯನ್ನು ತೆಗೆದುಕೊಂಡು ನಾಲ್ಕನೆಯವನೂ
ಬಹಳ ಹರ್ಷಚಿತ್ತನಾಗಿ ಅಲ್ಲಿಂದ ಹೊರಟನು.

ಹೀಗೆ ನಾಲ್ಕು ವರ್ಷಗಳು ಕಳೆಯಲು ತಾವು ನಿಶ್ಚಯಿಸಿದಂತೆ ನಾಲ್ಕು
ದಾರಿ ಕೂಡುವ ಸ್ಥಳದಲ್ಲಿ ನಾಲ್ವರು ಸಹೋದರರೂ ಬಂದು ಸೇರಿದರು.
ಆನಂತರ ತಾವು ಕಲಿತ ವಿದ್ಯೆಯನ್ನೆಲ್ಲಾ ಒಬ್ಬರಿಗೊಬ್ಬರು ತಿಳಿಸಿ, ತಾವು
ಇದು ತನಕ ಸಂಪಾದಿಸಿದ ಹಣದೊಂದಿಗೆ ಮನೆಯ ಕಡೆಗೆ ಹೊರಟರು.
ಮನೆಗೆ ಬಂದವರೇ ತಂದೆಯ ಬಳಿಗೆ ಬಂದರು. ಬಹಳ ಸಂತೋಷದಿಂದ
ತಂದೆಯು ನಾಲ್ವರನ್ನು ಆಲಿಂಗನ ಮಾಡಿ ಅವರ ವಿದ್ಯೆಯನ್ನೆಲ್ಲಾ ಒಂದೊಂ
ದಾಗಿ ತಿಳಿದನು.

ಆ ಮೇಲೆ ಒಂದು ದಿನ ಮನೆಯ ಎದುರಿನ ಒಂದು ಅತಿ ಎತ್ತರವಾದ
ಮರದಡಿ ತಂದೆ, ಮಕ್ಕಳು ಕುಳಿತಿರಲು, ಮಕ್ಕಳು ಕಲಿತ ವಿದ್ಯಾಕೌಶಲ್ಯ
ವನ್ನು ಪರೀಕ್ಷಿಸಬೇಕೆಂದು ಹವಣಿಸಿ ತಂದೆಯು ಎರಡನೆಯವನನ್ನು ಕರೆದು,
"ಈ ಮರದ ತುದಿಯಲ್ಲಿ ಒಂದು ಹಕ್ಕಿಯ ಗೂಡಿದೆ. ಅದರಲ್ಲಿ ಎಷ್ಟು ತತ್ತಿ
ಗಳಿವೆ ಎಂದು ಹೇಳು ನೋಡೋಣ," ಎಂದನು. ಕೂಡಲೆ ನಕ್ಷತ್ರ ನಿರೀ
ಕ್ಷಕನಾದ ಎರಡನೆಯವನು ತನ್ನ ಕನ್ನಡಿಯಲ್ಲಿ ನೋಡಿ, "ಐದು ತತ್ತಿಗಳಿವೆ"
ಎಂದನು.

ಆಗ ತಂದೆಯು ಒಂದನೆಯವನನ್ನು ಕರೆದು, "ಆ ತತ್ತಿಗಳಿಗೆ ಕಾವು ಕೊಡುತ್ತಿರುವ ಹಕ್ಕಿಗೆ ತಿಳಿಯದಂತೆ ಅವುಗಳನ್ನು ತೆಗೆದುಕೊಂಡು ಬಾ ನೋಡೋಣ," ಎನಲು ಒಂದನೆಯವನು ಅತಿಚಾತುರ್ಯದಿಂದ ಐದೂ ತತ್ತಿಗಳನ್ನು ತಂದುಕೊಟ್ಟನು.

ಅನಂತರ ಐದೂ ತತ್ತಿಗಳನ್ನು ತೆಗೆದುಕೊಂಡು ಮನೆಯ ಕಡೆಗೆ ಹೋಗಿ ಒಂದು ಮೇಜಿನ ಮೇಲೆ ನಾಲ್ಕು ತತ್ತಿಗಳನ್ನು ನಾಲ್ಕು ಮೂಲೆಗಳಲ್ಲಿಟ್ಟು, ಒಂದನ್ನು ನಡುವಿನಲ್ಲಿಟ್ಟು, "ಈ ತತ್ತಿಗಳನ್ನು ಪ್ರತಿಯೊಂದೂ ಎರಡರ್ಧವಾಗಿ ತುಂಡಾಗುವಂತೆ ಒಂದೇ ಬಾಣದಿಂದ ಹೊಡೆಯಲು ಸಾಧ್ಯವೆ?" ಎಂದು ಬೇಟೆಗಾರನಾದ ಮೂರನೆಯವನೊಡನೆ ಕೇಳಿದನು ಬೇಟೆಗಾರನು ತನ್ನ ತಂದೆಯ ಅಪೇಕ್ಷೆಯಂತೆ ತನ್ನ ಬಿಲ್ಲಿನಿಂದ ಒಂದೇ ಬಾಣದ ಮೂಲಕ ಅವುಗಳೆಲ್ಲವನ್ನು ತುಂಡರಿಸಿದನು.

ಕಡೆಗೆ ನಾಲ್ಕನೆಯವನನ್ನು ಕರೆದು, "ಇವುಗಳೆಲ್ಲವನ್ನು ಮೊಟ್ಟೆಗಳೊಳಗಿದ್ದ ಮರಿಗಳಿಗೆ ಅಪಾಯವಾಗದಂತೆ ಮೊದಲಿದ್ದಂತೆಯೇ ಸೆರೆಇಲ್ಲದ ರೀತಿಯಲ್ಲಿ ಹೊಲಿಯಲು ನಿನ್ನಿಂದ ಸಾಧ್ಯವೆ?" ಎಂದು ಕೇಳಲು ನಾಲ್ಕನೆಯವನು ತನ್ನ ಸೂಜಿಯ ಸಹಾಯದಿಂದ ತಂದೆಯು ಹೇಳಿದ ರೀತಿಯಲ್ಲಿ ಆ ಐದೂ ತತ್ತಿಗಳನ್ನು ಹೊಲಿದುಕೊಟ್ಟನು.

ಅನಂತರ ಒಂದನೆಯವನೊಡನೆ ಮೊದಲಿನಂತೆಯೇ ಅವುಗಳನ್ನು ಹಕ್ಕಿಗೆ ತಿಳಿಯದಂತೆ ಅದೇ ಗೂಡಿನಲ್ಲಿ ಕಾವು ಕೊಡುವ ರೀತಿಯಲ್ಲಿ ಇಟ್ಟು ಬರಬೇಕೆಂದು ತಿಳಿಸಲು ಅವನು ಕ್ಷಣಮಾತ್ರದಲ್ಲಿ ಅವುಗಳನ್ನು ಅವುಗಳ ಗೂಡಿನಲ್ಲಿ ಇಟ್ಟುಬಂದನು. ಹಕ್ಕಿಯು ಅವುಗಳಿಗೆ ಚೆನ್ನಾಗಿ ಕಾವುಕೊಟ್ಟು ಸ್ವಲ್ಪ ದಿವಸಗಳಲ್ಲೇ ಅವುಗಳು ಒಡೆದು ಮರಿಗಳು ಹೊರಗೆ ಬಂದುವು. ಅವುಗಳು ಎಲ್ಲಾ ಮರಿಗಳಂತೆಯೇ ಇದ್ದುವು. ಆದರೆ ತತ್ತಿಗಳನ್ನು ಹೊಲಿದ ಕಾರಣ ಪ್ರತಿಯೊಂದರ ಕುತ್ತಿಗೆಯಲ್ಲಿ ಒಂದು ಕೆಂಪು ಬಣ್ಣದ ಗೆರೆ ಮಾತ್ರ ಕಾಣುತ್ತಿತ್ತು. ಇದನ್ನೆಲ್ಲಾ ನೋಡಿ ತಂದೆಯು ಮಕ್ಕಳನ್ನು ಪುನಃ ಆಲಿಂಗನ ಮಾಡಿ, "ನಿಮ್ಮಲ್ಲಿ ಯಾರ ವಿದ್ಯೆಯು ಮೇಲು, ಯಾರ ವಿದ್ಯೆಯು ಕೀಳು ಎಂದು ಹೇಳಬರುವುದಿಲ್ಲ. ಯಾರಿಗೆ ಹೆಚ್ಚಿನ ಬಹುಮಾನ ಕೊಡುವುದೆಂಬುದೇ ತಿಳಿಯುವುದಿಲ್ಲ. ಅಂತೂ ಸ್ವಲ್ಪ ಸಮಯದಲ್ಲೇ ನಿಮಗೆ ತಕ್ಕುದಾದ ಬಹುಮಾನವು ಸಿಗದಿರಲಾರದು. ನೀವು ನಿಮ್ಮ

ಜೀವನೋಪಾಯಕ್ಕೆ ತಕ್ಕುದಾದ ದಾರಿ ಹುಡುಕಿಕೊಂಡಿರಿ," ಎಂದು ಮುಂತಾಗಿ ಹೊಗಳಿಕೆಯ ಮಾತುಗಳನ್ನಾಡಿದನು.

ಇದಾಗಿ ಹೆಚ್ಚು ದಿನಗಳು ಕಳೆದಿರಲಿಲ್ಲ. ಆ ಊರಿನ ರಾಜಸ್ಥಾನದಲ್ಲಿ ದೊಡ್ಡ ಕೋಲಾಹಲವೆದ್ದಿತ್ತು. ಇದು ಪೇಟೆಪಟ್ಟಣಗಳಿಗೂ ಹಬ್ಬಿತು. ರಾಜನ ಮಗಳನ್ನು ಒಂದು ಮಹಾ ಸರ್ಪವು ಹೊತ್ತುಕೊಂಡು ಹೋಗಿತ್ತು. ಆ ಮಹಾ ಸರ್ಪಕ್ಕೆ ದೊಡ್ಡ ರೆಕ್ಕೆಗಳೂ ಹರಿತವಾದ ಉಗುರುಗಳೂ ಇದ್ದುವು. ಇದಕ್ಕಾಗಿ ಈ ರಾಜನು ರಾತ್ರಿ ಹಗಲೆನ್ನದೆ ಕಳವಳಪಟ್ಟು ದುಃಖಿಸುತ್ತಿದ್ದನು. ರಾಜಕುಮಾರಿಯನ್ನು ತಂದವರಿಗೆ ಅವಳನ್ನು ಮದುವೆ ಮಾಡಿ ಕೊಡುವೆನೆಂದು ಘೋಷಿಸಿದನು.

ಇದನ್ನು ಕೇಳಿ ಈ ನಾಲ್ವರು ಸಹೋದರರು ತಮ್ಮಲ್ಲೇ ಆಲೋಚಿಸಿಕೊಂಡು, ಯಾಕೆ ತಮ್ಮ ವಿದ್ಯಾಚಾತುರ್ಯದಿಂದ ಆ ರಾಜ ಕುಮಾರಿಯನ್ನು ಮಹಾಸರ್ಪದ ದವಡೆಯಿಂದ ರಕ್ಷಿಸಿ ಹಿಂದಕ್ಕೆ ತರಬಾರದು ಎಂದು ಹವಣಿಸಿ ವಿಚಾರ ಪರವಶರಾದರು. ಅಷ್ಟರಲ್ಲಿ ಎರಡನೆಯವನು ತನ್ನ ಗನ್ನಡಿಯನ್ನು ತೆಗೆದು ನಕ್ಷತ್ರಗಳನ್ನು ಗುರುತಿಸಿಕೊಂಡು, "ಆ ರಾಜಕುಮಾರಿಯು ಬಹಳ ದೂರದಲ್ಲಿ ಸಮುದ್ರದ ಮಧ್ಯೆ ಒಂದು ಬಂಡೆಕಲ್ಲಿನ ಮೇಲೆ ಕುಳಿತುಕೊಂಡಿರುವುದನ್ನು ನಾನು ಕನ್ನಡಿಯಲ್ಲಿ ನೋಡುತ್ತೇನೆ. ಆ ಮಹಾ ಸರ್ಪವು ಬಳಿಯಲ್ಲಿದೆ," ಎಂದನು. ಆನಂತರ ನಾಲ್ವರೂ ಅರಸನ ಬಳಿಗೆ ಹೋಗಿ ಒಂದು ಹಡಗವನ್ನು ಪಡೆದು ಸಮುದ್ರ ಪಯಣ ಮಾಡಿ ಕಡೆಗೆ ರಾಜಕುಮಾರಿಯಿರುವ ಸ್ಥಳಕ್ಕೆ ಬಂದು ಮುಟ್ಟಿದರು. ಆದರೆ ಆ ಮಹಾ ಸರ್ಪವು ರಾಜಕುಮಾರಿಯ ತೊಡೆಯ ಮೇಲೆ ತನ್ನ ಹೆಡೆಯನ್ನಿಟ್ಟು ನಿದ್ರಿಸುತ್ತಿರುವುದನ್ನು ಕಂಡರು. ಬೇಟೆಗಾರನು ಇದನ್ನು ನೋಡಿ ಚೆನ್ನಾಗಿ ಆಲೋಚಿಸಿಕೊಂಡು, "ನಾನು ಆ ಮಹಾ ಸರ್ಪವನ್ನು ಈಗ ಹೊಡೆಯಬಾರದು; ಹೊಡೆದರೆ ರಾಜಕುಮಾರಿಯೂ ಸಾಯುವಳು," ಎಂದನು. ಅಷ್ಟರಲ್ಲಿ ಒಂದನೆಯವನು ಮಹಾಸರ್ಪಕ್ಕೆ ತಿಳಿಯದಂತೆ ರಾಜಕುಮಾರಿಯನ್ನು ಕದ್ದುಕೊಂಡು ಬಂದನು. ಮಹಾಸರ್ಪವು ಗೊರಕೆ ಹೊಡೆಯುತ್ತಲೇ ಇತ್ತು. ರಾಜಕುಮಾರಿಯು ಅಲ್ಲಿಂದ ಹೋದುದು ಅದಕ್ಕೆ ತಿಳಿಯಲಿಲ್ಲ.

ಹೀಗೆ ರಾಜಕುಮಾರಿಯೊಡನೆ ನಾಲ್ವರು ಸಹೋದರರು ಒಂದು ದೋಣಿಯಲ್ಲಿ ಕುಳಿತು ಹಡಗಿನ ಕಡೆಗೆ ಮುಂದರಿದರು. ಆದರೆ ಹಡಗಿನ

ಬಳಿಗೆ ಬರುವುದಕ್ಕಿಂತ ಮುಂಚಿತವಾಗಿ ಆ ಮಹಾ ಸರ್ಪವು ರಾಜಕುಮಾರಿಯು ಕಾಣದುದನ್ನು ನೋಡಿ ಗರ್ಜಿಸುತ್ತಾ ದೋಣಿಯನ್ನು ಹಿಂಬಾಲಿಸಿತು. ಇದನ್ನು ನಾಲ್ವರು ಸಹೋದರರು ನೋಡಿದರು. ಮಹಾಸರ್ಪವು ದೋಣಿಯ ಮೇಲೆ ಆಕಾಶದಲ್ಲಿ ಸುತ್ತಾಡಿ ದೋಣಿಯ ಮಧ್ಯಕ್ಕೆ ಹಾರುವುದರಲ್ಲಿತ್ತು. ಆಗ ಥಕ್ಕನೆ ಬೇಟೆಗಾರನಾದ ಮೂರನೆಯವನು ಮಹಾಸರ್ಪದ ಎದೆಗೆ ಒಂದು ಬಾಣವನ್ನೆಸೆಯಲು ಗಂಭೀರವಾಗಿ ಗರ್ಜನೆ ಮಾಡುತ್ತಾ ಕೆಳಗೆ ಬಿತ್ತು. ಆದರೆ ಅದು ಅಷ್ಟೊಂದು ಅದ್ಭುತಪ್ರಾಣಿಯಾದ್ದರಿಂದ ದೋಣಿಯ ಬದಿಗೆ ಬಿದ್ದು ದೋಣಿಯು ಚೂರು ಚೂರಾಗಿ ಒಡೆದುಹೋಯಿತು. ನಾಲ್ವರು ಸಹೋದರರೂ, ರಾಜಕುಮಾರಿಯೂ ಸಮುದ್ರದಲ್ಲಿ ಈಜಬೇಕಾಯಿತು. ಆಗ ನಾಲ್ಕನೆಯವನು ಒಡೆದು ಚೂರಾದ ದೋಣಿಯ ಹಲಿಗೆಗಳನ್ನೆಲ್ಲಾ ಒಟ್ಟು ಸೇರಿಸಿ ನಿಮಿಷ ಮಾತ್ರದಲ್ಲಿ ತನ್ನ ಸೂಜಿಯ ಸಹಾಯದಿಂದ ಹೊಲಿದು ಮೊದಲಿನಂತೆಯೇ ಮಾಡಿಬಿಟ್ಟನು. ಎಲ್ಲರೂ ಪುನಃ ದೋಣಿಯಲ್ಲಿ ಕುಳಿತುಕೊಂಡು ಹಡಗಿಗೆ ಬಂದು ಮುಟ್ಟಿದರು. ಅನಂತರ ಸುರಕ್ಷಿತವಾಗಿ ಸಮುದ್ರ ಪ್ರಯಾಣಗೈದು ಮನೆಗೆ ಬಂದು ತಲುಪಿದರು.

ಹೀಗೆ ರಾಜಕುಮಾರಿಯನ್ನು ಅವಳ ತಂದೆ ಇದ್ದಲ್ಲಿಗೆ ತರಲು ರಾಜನು ಬಹಳ ಸಂತೋಷಪಟ್ಟನು. ಅವರಿಗೆ ಅಭಿವಂದನೆಗಳನ್ನರ್ಪಿಸಿ, "ನಿಮ್ಮಲ್ಲಿ ಒಬ್ಬರು ಅವಳನ್ನು ಮದುವೆಯಾಗಬಹುದು; ಆದರೆ ಯಾರು ಅವಳನ್ನು ಮದುವೆಯಾಗಬಹುದು; ಆದರೆ ಯಾರು ಅವಳನ್ನು ಮದುವೆಯಾಗುವುದೆಂಬುದನ್ನು ನೀವೇ ನಿರ್ಧರಿಸಿಕೊಳ್ಳಬೇಕು," ಎಂದನು. ಅಷ್ಟರಲ್ಲಿ ನಾಲ್ವರು ಸಹೋದರರು ತಮ್ಮೊಳಗೆ ಜಗಳಾಡಿಕೊಳ್ಳಲು ಪ್ರಾರಂಭಿಸಿದರು. ನಕ್ಷತ್ರ ನಿರೀಕ್ಷಕನು, "ಮೊದಲು ಅವಳು ಎಲ್ಲಿರುವಳು ಎಂದು ನೋಡಿ ನಾನು ಹೇಳದೆ ಇರುತಿದ್ದರೆ ನಿಮ್ಮ ವಿದ್ಯೆ ಎಲ್ಲಾ ಅಪ್ರಯೋಜಕವಾಗುತ್ತಿತ್ತು. ಆದ್ದರಿಂದ ಅವಳು ನನಗೆ ಸಿಗಬೇಕು," ಎಂದನು.

"ನಾನು ಅವಳನ್ನು ಮಹಾಸರ್ಪದ ಬಳಿಯಿಂದ ಕದ್ದು ತಾರದಿರುತಿದ್ದರೆ ನೀನು ನೋಡಿಯೂ ಪ್ರಯೋಜನವಾಗುತ್ತಿರಲಿಲ್ಲ; ಆದ್ದರಿಂದ ನಾನೇ ಅವಳನ್ನು ಮದುವೆಯಾಗಲು ಅರ್ಹನು," ಎಂದನು ಒಂದನೆಯವನು.

"ನಾನು ಆ ಮಹಾಸರ್ಪವನ್ನು ಕೊಲ್ಲದಿರುತ್ತಿದ್ದರೆ ನಾವೆಲ್ಲರೂ ಅದರ ಬಾಯಿಗೆ ತುತ್ತಾಗಬೇಕಾಗಿತ್ತು. ಅವಳನ್ನು ರಕ್ಷಿಸಿ ತಂದವನು ನಾನು;

ಆದ್ದರಿಂದ ಅವಳನ್ನು ನಾನೇ ಮದುವೆಯಾಗಬೇಕು," ಎಂದನು ಮೂರನೆಯವನು.

"ಆದರೆ ದೋಣಿಯ ಹಲಿಗೆಗಳನ್ನೆಲ್ಲಾ ಒಟ್ಟು ಸೇರಿಸಿ ಹೊಲಿಯದೆ ಇರುತ್ತಿದ್ದರೆ ನಾವೆಲ್ಲರೂ ನೀರು ಪಾಲಾಗುತ್ತಿದ್ದೆವು. ಅವಳನ್ನೂ ನಿಮ್ಮನ್ನೂ ಬದುಕಿಸಿದವನು ನಾನು; ಆದ್ದರಿಂದ ಅವಳು ನನ್ನವಳು," ಎಂದನು ನಾಲ್ಕನೆಯವನು.

ಇದನ್ನು ನೋಡಿ ರಾಜನು ಹೇಳಿದನು, "ನೀವು ನಾಲ್ವರೂ ಒಟ್ಟು ಕೂಡಿ ನನ್ನ ಕುಮಾರಿಯನ್ನು ರಕ್ಷಿಸಿ ಕರೆತಂದಿರಿ. ಪ್ರತಿಯೊಬ್ಬನೂ ಹೇಳಿದುದು ಸರಿ. ಆದರೆ ಯಾರಾದರೂ ಒಬ್ಬನೇ ಅವಳನ್ನು ಮದುವೆಯಾಗಬೇಕಾದ್ದರಿಂದ ನೀವು ನಾಲ್ವರೂ ಅವಳನ್ನು ಬಿಟ್ಟುಬಿಡಿ. ಆದರೆ ನಿಮ್ಮ ಉಪಕಾರಕ್ಕೂ, ನಿಮ್ಮ ವಿದ್ಯಾಕೌಶಲ್ಯಕ್ಕೂ ಮೆಚ್ಚಿ ನಿಮಗೆ, ಪ್ರತಿಯೊಬ್ಬನಿಗೂ ನನ್ನ ಅರ್ಧರಾಜ್ಯವನ್ನು ಪಾಲು ಮಾಡಿ ಕೊಡುವೆನು. ನೀವು ಸುಖದಿಂದ ಜೀವನ ನಡೆಸಬಹುದು," ಎಂದನು. ಇದನ್ನು ಕೇಳಿ ನಾಲ್ವರು ಸಹೋದರರಿಗೂ ಬಹಳ ಸಂತೋಷವಾಯಿತು. ತಮ್ಮೊಳಗೆ ಜಗಳಾಡುವುದಕ್ಕಿಂತ ಅರ್ಧ ರಾಜ್ಯವನು ಪಡೆದುಕೊಂಡು ಹೋದರೆ ತಮ್ಮ ತಂದೆಗೆ ಸಂತೋಷವಾಗಬಹುದೆಂದು ನೆನೆದು ನಾಲ್ವರು ಸಹೋದರರು ಅರ್ಧ ರಾಜ್ಯದೊಂದಿಗೆ ತಮ್ಮ ಮನೆಗೆ ಹಿಂದಿರುಗಿದರು. ಅವರ ತಂದೆಗೂ ಇದನ್ನು ನೋಡಿ ಅತಿಯಾದ ಆನಂದವಾಯಿತು. ಅನಂತರ ತಮ್ಮ ತಂದೆಯನ್ನು ಆರೈಕೆಮಾಡುತ್ತಾ ತಮ್ಮ ಜೀವಮಾನವನ್ನು ಸಂತೋಷದಿಂದ ಕಳೆದರು.

೬. ನಾಯಿ ಮತ್ತು ಗುಬ್ಬಚ್ಚಿ

ಒಬ್ಬ ಕುರುಬನ ನಾಯಿಯು ತನಗೆ ಏನೂ ತಿನ್ನಲು ಕೊಡದಿರಲು ಹಸಿವೆಯಿಂದ ತನ್ನ ಯಜಮಾನನನ್ನು ಬಿಟ್ಟು ಓಡಿಹೋಯಿತು. ದಾರಿಯಲ್ಲಿ ಒಂದು ಗುಬ್ಬಚ್ಚಿಯು ಕಾಣಸಿಕ್ಕಿ, "ನೀನು ಯಾಕಾಗಿ ಇಷ್ಟು ಬೇಸರದಿಂದಿರುವೆ?" ಎಂದು ಕೇಳಲು, "ನನಗೆ ಬಹಳ ಹಸಿವೆಯಾಗಿದೆ ಮತ್ತು ತಿನ್ನಲು ಏನೂ ಇಲ್ಲ," ಎಂದಿತು. "ಹಾಗಾದರೆ ನನ್ನೊಂದಿಗೆ ಇನ್ನೊಂದು ಪೇಟೆಗೆ ಬಾ. ನಾನು ನಿನಗೆ ಬೇಕಾದಷ್ಟು ತಿನ್ನಲು ತೋರಿಸಿ ಕೊಡುತ್ತೇನೆ," ಎಂದಿತು ಗುಬ್ಬಚ್ಚಿ. ಹೀಗೆ ಅವುಗಳೆರಡೂ ಪೇಟೆಗೆ ಬಂದುವು. "ನೀನು ಸ್ವಲ್ಪ ಹೊತ್ತು ಇಲ್ಲೇ ಇರು. ನಾನು ನಿನಗೆ ಸ್ವಲ್ಪ ಮಾಂಸವನ್ನು ಚುಚ್ಚಿ ತರುವೆನು," ಎಂದು ಗುಬ್ಬಚ್ಚಿಯು ಒಬ್ಬ ಕಸಾಯಿಯ ಅಂಗಡಿಗೆ ಹೋಗಿ ಮಾಂಸದ ಹಲಿಗೆಯಿಂದ ಒಂದು ಮಾಂಸದ ತುಂಡನ್ನು ಹೆಕ್ಕಿ ಕೆಳಗೆ ಹಾಕಿತು. ನಾಯಿಯು ಅದನ್ನು ಒಂದು ಬದಿಗೆ ಎಳೆದು ತಿನ್ನಲು ಗುಬ್ಬಚ್ಚಿಯು, "ನಿನಗೆ ಇನ್ನು ಬೇಕೆ?" ಎಂದು ಕೇಳಿತು. ನಾಯಿ "ಬೇಕು," ಎಂದಿತು. ಗುಬ್ಬಚ್ಚಿಯು ಪುನಃ ಮತ್ತೊಂದು ಮಾಂಸವನ್ನು ಚುಚ್ಚಿ ಕೆಳಗೆ ಹಾಕಿತು. ನಾಯಿಯು ಅದನ್ನು ಎಳೆದು ತಿಂದಿತು. ಗುಬ್ಬಚ್ಚಿಯು, "ಇನ್ನೂ ತಿನ್ನಲು ಬೇಕೆ?" ಎಂದು ಕೇಳಿತು. ನಾಯಿಯು, "ನನಗೆ ಮಾಂಸ ತಿಂದ ನಂತರ ಇನ್ನು ಬ್ರೆಡ್ಡು ತಿನ್ನಬೇಕು," ಎಂದಿತು. "ಹಾಗಾದರೆ ನನ್ನೊಂದಿಗೆ ಬಾ," ಎಂದು ಗುಬ್ಬಚ್ಚಿಯು ನಾಯಿಯನ್ನು ಬ್ರೆಡ್ಡು ಮಾರುವವನ ಅಂಗಡಿಗೆ ಕರೆದುಕೊಂಡು ಹೋಯಿತು. ಗುಬ್ಬಚ್ಚಿಯು ಒಂದು ಬ್ರೆಡ್ಡನ್ನು ಕಚ್ಚಿ ಕೆಳಗೆ ಹಾಕಲು ನಾಯಿಯು ಅದನ್ನು ಕಚ್ಚಿ ಹೊರಗೆ ತಂದು ತಿಂದಿತು. ನಾಯಿಯು ಮತ್ತೂ ತಿನ್ನಲು ಆಕಾಂಕ್ಷೆಯುಳ್ಳದಾದ್ದರಿಂದ ಗುಬ್ಬಚ್ಚಿಯು ಅದನ್ನು ಇನ್ನೊಂದು ಅಂಗಡಿಗೆ ಕೊಂಡೊಯ್ದಿತು. ಮತ್ತೂ ಒಂದು ಬ್ರೆಡ್ಡನ್ನು ಕಚ್ಚಿ ಕೆಳಗೆ ಹಾಕಿತು. ನಾಯಿಯು ಅದನ್ನು ತಿಂದ ಮೇಲೆ, "ಈಗ ಸಾಕೆ?" ಎಂದು ಗುಬ್ಬಚ್ಚಿಯು ಕೇಳಲು, "ಸಾಕು. ಇನ್ನು ಪೇಟೆಯಿಂದ ಹೊರಗೆ ಹೋಗುವ," ಎಂದು ನಾಯಿಯು ಹೇಳಲು, ಎರಡೂ ಒಟ್ಟಿಗೆ ಮೇಗಿನ ಮಾರ್ಗಕ್ಕೆ ಬಂದುವು.

ನಾಯಿಯು ತನಗೆ ಬಹಳ ಆಯಾಸವಾಗಿದೆಯೆಂದು ಮಾರ್ಗದ ಮಧ್ಯದಲ್ಲಿ ಮಲಗಿತು. ಸ್ವಲ್ಪ ಸಮಯದಲ್ಲಿ ಅದಕ್ಕೆ ನಿದ್ದೆ ಹತ್ತಿತು. ಆಗ ಗುಬ್ಬಚ್ಚಿಯು ಒಂದು ಪೊದರಿನ ಬುಡದಲ್ಲಿ ಕೂತಿತ್ತು. ಅಷ್ಟರಲ್ಲಿ ಒಬ್ಬನು ಗಾಡಿ ಹೊಡೆದುಕೊಂಡು ಬಲಮಾರ್ಗವಾಗಿ ಬರುತ್ತಿದ್ದನು. ಗಾಡಿಗೆ ಮೂರು ಕುದುರೆಗಳಿದ್ದುವು. ಗಾಡಿಯಲ್ಲಿ ಎರಡು ಪೆಟ್ಟಿಗೆ ತುಂಬ ವಿಸ್ಕಿಯ ಕುಪ್ಪಿಗಳಿದ್ದುವು. ಗಾಡಿಯು ನೇರಾಗಿ ಗಾಡಿಹೊಡೆಯುವವನಿಗೆ ಕಾಣದಂತೆ ಚಕ್ರಗಳು ನಾಯಿಯ ಮೇಲಿಂದ ಹಾದುಹೋಗುವಂತೆ ಬರುತ್ತಿತ್ತು. ಆಗ ಗುಬ್ಬಚ್ಚಿಯು ಅವನನ್ನು ಕರೆದು, "ಗಾಡಿಯನ್ನು ನಾಯಿಯ ಮೇಲೆ ಕೊಂಡೊಯ್ದು ಅದನ್ನು ಕೊಲ್ಲದಿರು. ಇದು ನಿನ್ನ ಕೆಡುಕನ್ನುಂಟುಮಾಡುವುದು," ಎಂದಿತು. ಗಾಡಿ ಹೊಡೆಯುವವನು ಅದನ್ನು ಲಕ್ಷಿಸದೆ ತನ್ನಲ್ಲೇ ಗುಣುಗುಟುತ್ತಾ, "ನೀನೇ ನನಗೆ ಅನಿಷ್ಟ. ನಿನ್ನಿಂದ ಏನು ಮಾಡಲು ಸಾಧ್ಯ?" ಎಂದು ಮುಂದಕ್ಕೆ ಹೊಡೆದುಕೊಂಡುಹೋದನು. ನಾಯಿಯ ಮೇಲೆ ಚಕ್ರಗಳು ಉರುಳಲು ನಾಯಿಯು ಸತ್ತುಹೋಯಿತು. ಆಗ ಗುಬ್ಬಚ್ಚಿಯು ಸಿಟ್ಟುಗೊಂಡು, "ನೀಚ. ನನ್ನ ಮಿತ್ರನನ್ನು ಕೊಂದಿ" ಎನಲು, ಗಾಡಿ ಹೊಡೆಯುವವನು, "ನೀನು ನನಗೆ ಬೇಕಾದಷ್ಟು ಕೆಡುಕನ್ನುಂಟುಮಾಡು. ನಿನಗೆ ಏನು ಸಾಧ್ಯ!" ಎಂದು ಮುಂದಕ್ಕೆ ಸವಾರಿಮಾಡಿದನು. ಗುಬ್ಬಚ್ಚಿಯು ಸ್ವಲ್ಪ ಮುಂದೆ ಹೋಗುವಷ್ಟರಲ್ಲೇ ಗಾಡಿಯೊಳಕ್ಕೆ ಹಾರಿ ಕುಪ್ಪಿಯ ಮುಚ್ಚಳವನ್ನು ಚುಚ್ಚಿತು. ವಿಸ್ಕಿಯೆಲ್ಲಾ ಕೆಳಗೆ ಸುರಿಯಿತು. ಸ್ವಲ್ಪ ನಂತರ ಗಾಡಿಯವನು ಅದನ್ನು ನೋಡಿ, "ನಾನೆಷ್ಟು ನಿರ್ಭಾಗ್ಯಶಾಲಿ!" ಎನಲು, ಗುಬ್ಬಚ್ಚಿಯು "ಇನ್ನೂ ನೀನು ಮೂರ್ಖನಲ್ಲ," ಎಂದಿತು. ಗುಬ್ಬಚ್ಚಿಯು ಅಲ್ಲಿಂದ ಹಾರಿ ಕುದುರೆಯ ತಲೆಯ ಮೇಲೆ ಕೂತು ಅದಕ್ಕೆ ಚುಚ್ಚಿತು. ಕುದುರೆಯು ಹಿಂಬದಿಯ ಕಾಲುಗಳಿಂದ ನೆಗೆಯಿತು. ಗಾಡಿ ಹೊಡೆಯುವವನು ತನ್ನ ಚಾಟಿಯಿಂದ ಗುಬ್ಬಚ್ಚಿಯ ಕಡೆಗೆ ಹೊಡೆಯಲು ಕುದುರೆಗೆ ಪೆಟ್ಟು ತಾಗಿ ಅದು ಬಿದ್ದು ಸತ್ತುಹೋಯಿತು. "ಎಷ್ಟು ನಿರ್ಭಾಗ್ಯಶಾಲಿ ನಾನು!" ತನ್ನಲ್ಲೆಂದುಕೊಂಡನು ಮತ್ತು ಇನ್ನೆರಡು ಕುದುರೆಗಳ ಮೂಲಕ ಮುಂದಕ್ಕೆ ಹೊಡೆದನು. ಆಗ "ನೀನು ಇನ್ನೂ ಮೂರ್ಖನಾಗಲಿಲ್ಲ," ಎಂದು ಗುಬ್ಬಚ್ಚಿಯು, ಇನ್ನೊಂದು ಪೆಟ್ಟಿಗೆಯ ಕುಪ್ಪಿಯ ಮುಚ್ಚಳವನ್ನು ಚುಚ್ಚಲು ವಿಸ್ಕಿ ಎಲ್ಲಾ ಚೆಲ್ಲಿ ಹೋಯಿತು. ಅದನ್ನು ನೋಡಿ ಗಾಡಿ ಹೊಡೆಯುವವನು, "ನಾನೆಷ್ಟು ನಿರ್ಭಾಗ್ಯಶಾಲಿ!"

ಎನಲು, ಗುಬ್ಬಚ್ಚಿಯು, "ನೀನು ಇನ್ನೂ ಮೂರ್ಖನಾಗಲಿಲ್ಲ," ಎಂದು ಮತ್ತೊಂದು ಕುದುರೆಯ ತಲೆಯ ಮೇಲೆ ಕುಳಿತು ಚುಚ್ಚಿತು. ಕುದುರೆಯು ನೆಗೆಯಲು ಗುಬ್ಬಚ್ಚಿಗೆ ಬಲವಾದ ಪೆಟ್ಟುಹೊಡೆದನು. ಆದರೆ ಅದು ಹಾರಿತು. ಪೆಟ್ಟು ಕುದುರೆಗೆ ತಾಗಿ ಅದೂ ಸತ್ತುಹೋಯಿತು. "ನಾನೆಷ್ಟು ನಿರ್ಭಾಗ್ಯಶಾಲಿ!" ಗಾಡಿ ಹೊಡೆಯುವವನೆನ್ನಲು. ಗುಬ್ಬಚ್ಚಿಯು, "ನೀನು ಮೂರ್ಖನಾಗಲಿಲ್ಲ," ಎಂದು ಇನ್ನೊಂದು ಕುದುರೆಯ ತಲೆಯ ಮೇಲೆ ಕುಳಿತು ಕುದುರೆಯು ನೆಗೆಯಲು ಗಾಡಿ ಹೊಡೆಯುವವನು ಗುಬ್ಬಚ್ಚಿಯ ಕಡೆಗೆ ಬಲವಾದ ಪೆಟ್ಟುಹೊಡೆಯಲು ಆ ಕುದುರೆಯೂ ಸತ್ತುಹೋಯಿತು. "ನಾನೆಷ್ಟು ನಿರ್ಭಾಗ್ಯಶಾಲಿ!" ಎಂದು ಗಾಡಿ ಹೊಡೆಯುವವನು ಹೇಳಲು, ಗುಬ್ಬಚ್ಚಿಯು, "ನೀನು ಇನ್ನೂ ಮೂರ್ಖನಾಗಲಿಲ್ಲ. ಮನೆಗೆ ಹೋದ ನಂತರ ಬೇಕಾದಷ್ಟು ಶಿಕ್ಷೆ ಕೊಡುವೆನು," ಎಂದಿತು.

ಗಾಡಿ ಹೊಡೆಯುವವನು ಮನೆಗೆ ಬರಲು ಅವನ ಹೆಂಡತಿಯು ಅವನನ್ನು ನೋಡಿ, "ಹಾ, ನಮ್ಮ ಮನೆಗೆ ಒಂದು ಕೆಟ್ಟ ಹಕ್ಕಿಯು ಬಂದು ಪ್ರಪಂಚದ ಹಕ್ಕಿಗಳನ್ನೆಲ್ಲಾ ಕರೆದು, ಧಾನ್ಯವನ್ನು ತಿನ್ನುತ್ತಾ ಇದೆ," ಎಂದಳು. ಗಾಡಿ ಹೊಡೆಯುವವನು ಓಡಿಹೋಗಿ ಮಾಳಿಗೆ ಹತ್ತಿ ನೋಡಲು ಸಾವಿರಾರು ಹಕ್ಕಿಗಳ ಮಧ್ಯದಲ್ಲಿ ಗುಬ್ಬಚ್ಚಿಯು ಕುಳಿತು ಧಾನ್ಯವನ್ನು ತಿನ್ನುತ್ತಿದ್ದುವು. "ನಾನೆಷ್ಟು ನಿರ್ಭಾಗ್ಯಶಾಲಿ!" ಎಂದನು ಗಾಡಿ ಹೊಡೆಯುವವನು. "ಇನ್ನೂ ನೀನು ಮೂರ್ಖನಾಗಲಿಲ್ಲ ನಿನ್ನ ನಿಷ್ಠುರತೆಗೆ ನಿನ್ನ ಜೀವನವನ್ನೇ ಬಲಿಕೊಡಬೇಕಾಗುವುದು," ಎಂದು ಹಾರಿ ಹೋಯಿತು ಗುಬ್ಬಚ್ಚಿ.

ಗಾಡಿ ಹೊಡೆಯುವವನು ತನ್ನ ಧಾನ್ಯವೆಲ್ಲಾ ಕಾಣದಿರಲು ಬಹಳ ಬೇಸರದಿಂದ ಅಡಿಗೆ ಕೋಣೆಗೆ ಹೋಗಿ ಕೋಪದಿಂದ ಹೊಗೆ ನಳಿಗೆಯ ಬುಡದಲ್ಲಿ ಕುಳಿತು ಗುಬ್ಬಚ್ಚಿಯು ಕಿಟಕಿಯ ಹೊರಗಿಂದ ಕುಳಿತು, "ಗಾಡಿ ಹೊಡೆಯುವವನೆ, ನಿನ್ನ ನಿಷ್ಠುರತೆಗೆ ನಿನ್ನ ಜೀವನವನ್ನೇ ಬಲಿಕೊಡಬೇಕಾಗುವುದು," ಎನಲು, ಗಾಡಿ ಹೊಡೆಯುವವನು ಮತ್ತೂ ಕೋಪಗೊಂಡು ಗುಬ್ಬಚ್ಚಿಯ ಕಡೆಗೆ ತನ್ನ ಕೈಕೊಡಲಿಯನ್ನು ಎಸೆದನು. ಗುಬ್ಬಚ್ಚಿಯು ಹಾರಿ ಕಿಟಕಿಯ ಹಲಿಗೆಯನ್ನು ಚುಚ್ಚಿ, "ಗಾಡಿ ಹೊಡೆಯುವವನೆ, ನಿನ್ನ ನಿಷ್ಠುರತೆಗೆ ನಿನ್ನ ಜೀವನವನ್ನೇ ಬಲಿಕೊಡಬೇಕಾಗುವುದು," ಎನಲು, ಗಾಡಿ ಹೊಡೆಯುವವನು ಕಿಟಕಿಯ ಹಲಿಗೆಗೆ ಬಲವಾದ ಪೆಟ್ಟು ಹೊಡೆಯಲು

ಅದು ಎರಡು ತುಂಡಾಯಿತು. ಗುಬ್ಬಚ್ಚಿಯು ಅತ್ತಿತ್ತ ಹಾರಾಡಲು ಪ್ರಾರಂಭಿಸಿತು. ಗಾಡಿ ಹೊಡೆಯುವವನೂ ಅವನ ಹೆಂಡತಿಯೂ ಕೋಪದಿಂದ ಓಡಾಡುತ್ತಾ, ಗ್ಲಾಸುಗಳು, ಕುರ್ಚಿಗಳು, ಬೆಂಚುಗಳು, ಮೇಜು ಮುಂತಾದ ಮನೆಯ ಸಾಮಾನುಗಳನ್ನೆಲ್ಲಾ ಮತ್ತು ಗೋಡೆಗಳನ್ನೂ ಹಕ್ಕಿಯನ್ನು ಹಿಡಿಯಲಾರದೆ ಒಡೆದು ಹಾಕಿದರು. ಕಡೆಗೆ ಹೇಗಾದರೂ ಹಕ್ಕಿಯನ್ನು ಹಿಡಿದರು. ಹೆಂಡತಿಯು, "ನಾನು ಅದನ್ನು ಕೂಡಲೇ ಕೊಂದುಬಿಡಲೇ?" ಎನಲು, "ಬೇಡ, ಹಾಗೆ ಅದನ್ನು ಬೇಗನೆ ಬಿಟ್ಟುಬಿಡಬಾರದು. ಅದು ಇನ್ನೂ ಹೆಚ್ಚು ಕಷ್ಟಪಡಬೇಕು. ನಾನು ಅದನ್ನು ತಿನ್ನುವೆನು," ಎಂದನು ಗಾಡಿ ಹೊಡೆಯುವವನು.

ಆದರೆ ಗುಬ್ಬಚ್ಚಿಯು, ಅತ್ತಿತ್ತ ಹೊರಳಾಡಿ ರೆಕ್ಕೆ ಬಡಿದು ಕುತ್ತಿಗೆಯನ್ನು ಮೇಲಕ್ಕೆತ್ತಿ, "ಗಾಡಿ ಹೊಡೆಯುವವನೆ! ನಿನ್ನ ನಿಷ್ಠುರತೆಗೆ ನಿನ್ನ ಜೀವನವನ್ನೇ ಬಲಿಕೊಡಬೇಕಾಗುವುದು." ಎಂದಿತು ಗುಬ್ಬಚ್ಚಿ. ಗಾಡಿ ಹೊಡೆಯುವವನಿಗೆ ಇನ್ನು ಹೆಚ್ಚು ಸಮಯ ಕಾಯಲು ಸಾಧ್ಯವಾಗಲಿಲ್ಲ. "ಹೆಂಡತಿ, ನನ್ನ ಕೈಯಲ್ಲಿರಲು ಕೈಕೊಡಲಿಯಿಂದ ಹೊಡೆದು ಅದನ್ನು ಕೊಂದು ಬಿಡು," ಎನಲು, ಅವನ ಹೆಂಡತಿಯು ಕೈಕೊಡಲಿಯಿಂದ ಹೊಡೆದಳು. ತನ್ನ ಪೆಟ್ಟು ತಪ್ಪಿ ಹೋಗಿ ತನ್ನ ಗಂಡನ ತಲೆಯ ಮೇಲೆ ಪೆಟ್ಟು ಬಿತ್ತು. ಅವನು ಸತ್ತು ಕೆಳಗೆ ಬೀಳಲು ಗುಬ್ಬಚ್ಚಿಯು ತನ್ನ ಗೂಡಿಗೆ ಮೆಲ್ಲನೆ ಹಾರಿಹೋಯಿತು.

೭. ಚಂದ್ರಗುಪ್ತ ಮತ್ತು ಮನೋರಮೆಯರ ಅದ್ಭುತ ಕೃತ್ಯ

"ಪರ್ವತದಲ್ಲಿ ಕಾಯಿಗಳು ಬೆಳೆದಿವೆ. ನಾವು ಅವುಗಳನ್ನು ಕೊಯ್ಯಲು ಹೋದರೆ ಬೇಕಾದಷ್ಟು ತಿನ್ನಬಹುದು. ಅಲ್ಲವಾದರೆ ಅವುಗಳನ್ನು ಅಳಿಲುಗಳು ತಿಂದು ಮುಗಿಸಬಹುದು," ಎಂದು ಚಂದ್ರಗುಪ್ತನು ತನ್ನ ಹೆಂಡತಿ ಮನೋರಮೆಯೊಡನೆ ಹೇಳಿದನು. "ಬಹಳ ಒಳ್ಳೇಯದು, ನಾವಿಬ್ಬರೂ ಹೋಗಿ ಇಡೀ ದಿನ ಅಲ್ಲಿ ಇರಬಹುದು," ಎಂದಳು ಮನೋರಮೆ. ಹೀಗೆ ಅವರಿಬ್ಬರೂ ಪರ್ವತಕ್ಕೆ ಹೋದರು. ಕಾಯಿಗಳನ್ನು ಕೊಯಿದು ತಿಂದರು. ಸಂಜೆಯಾದರೂ ಅವರಿಗೆ ಹಿಂದಿರುಗುವ ನೆನಪು ಹುಟ್ಟಲಿಲ್ಲ. ನಂತರ ನಡಿಯಬೇಕಾಗಿಲ್ಲ ಎಂದು ಗ್ರಹಿಸಿ ಚಂದ್ರಗುಪ್ತನು ಕಾಯಿಗಳ ಸಿಪ್ಪೆಗಳನ್ನು ಸೇರಿಸಿ ಒಂದು ಗಾಡಿ ಮಾಡಿದನು. ಮನೋರಮೆಯು ಅದರೊಳಗೆ ಹಾರಿ, "ಗಾಡಿ ಕೊಂಡೊಯ್ಯಿರಿ," ಎಂದು ಚಂದ್ರಗುಪ್ತನೊಡನೆ ಹೇಳಿದಳು. ಚಂದ್ರಗುಪ್ತನು, "ಒಳ್ಳೆಯ ತಮಾಷೆ, ನೀನು ಎಳೆಯುವುದಾದರೆ ನಾನು ಒಳಗೆ ಕುಳಿತು ಗಾಡಿ ಹೊಡೆಯುವವನಾಗುವೆನು," ಎಂದನು. ಹೀಗೆ ಮಾತಾಡುತ್ತಿರಲು ಅಲ್ಲಿಗೆ ಒಂದು ಬಾತುಕೋಳಿ ಬಂದು ಕೋಪದಿಂದ, "ಕಳ್ಳರೆ, ಹಣ್ಣುಗಳನ್ನೆಲ್ಲಾ ತಿಂದು ವಂಚಿಸಿದಿರಿ. ನಿಮ್ಮ ವಂಚನೆಗೆ ತಕ್ಕ ಕೆಲಸ ಮಾಡುವೆನು," ಎಂದು ಚಂದ್ರಗುಪ್ತನಿಗೆ ತನ್ನ ಕಾಲಿನಿಂದ ಹೊಡೆಯಿತು. ಚಂದ್ರಗುಪ್ತನು ಬಾತುಕೋಳಿಯು ತಮ್ಮನ್ನು ಗಾಡಿಯಲ್ಲಿ ಎಳೆಯಲು ಒಪ್ಪುವ ತನಕ ಅದಕ್ಕೆ ಹೊಡೆಯಲು ಸುರು ಹಚ್ಚಿದನು. ಹೀಗೆ ಬಾತುಕೋಳಿ ಅವರನ್ನು ಪರ್ವತದ ಮಾರ್ಗವಾಗಿ ಆದಷ್ಟು ಬೇಗನೆ ಎಳೆದುಕೊಂಡು ಹೋಯಿತು.

ಅಷ್ಟರಲ್ಲಿ ಪರ್ವತದ ದಾರಿಯಲ್ಲಿ ಒಂದು ಸೂಜಿ ಮತ್ತು ಮೊಳೆಯು ಕತ್ತಲಾದದ್ದು ತಿಳಿಯದೆ ಹೋಗುತ್ತಿದ್ದುವು. ಆಗ ಸೂಜಿಯು, "ನಿಲ್ಲಿ, ನಿಲ್ಲಿ, ಒಂದು ಗಾಡಿಯು ಬರುತ್ತಿದೆ. ಅದರಲ್ಲಿ ಹೋಗಬಹುದು," ಎಂದು ಗಾಡಿ ಹೊಡೆಯುವವನೊಡನೆ ಕೇಳಿತು. ಚಂದ್ರಗುಪ್ತನು ಅವುಗಳನ್ನು ನೋಡಿ ಚಿಕ್ಕ ಪ್ರಾಣಿಗಳು, ಹೆಚ್ಚು ಸ್ಥಳ ಬೇಕಾಗಿಲ್ಲ ಎಂದು ಗ್ರಹಿಸಿ, ಚಕ್ರಗಳಿಗೆ ಕೊಳೆ ಆಗದಂತೆ ಮತ್ತು ಮನೋರಮೆಯ ಬೆರಳುಗಳಿಗೆ ತಾಗ

ದಂತೆ ಹತ್ತಲು ಭರವಸೆಕೊಟ್ಟ ನಂತರ, "ನೀವು ಗಾಡಿಯಲ್ಲಿ ಹತ್ತಬಹುದು" ಎಂದನು.

ರಾತ್ರಿ ಬಹಳ ಹೊತ್ತು ಕಳೆಯಲು ಅವರು ಒಂದು ಹೋಟೆಲಿಗೆ ಬಂದು ಮುಟ್ಟಿದರು. ರಾತ್ರಿಯ ವಸತಿಗೂ ಊಟಕ್ಕೂ ಅಲ್ಲಿ ಆಶ್ರಯ ಕೇಳಿದರು. ಇವರು ಅಷ್ಟು ಉತ್ತಮರಾಗಿರಲಾರರೆಂದು ಗ್ರಹಿಸಿ ಹೋಟೆಲಿನ ಯಜಮಾನನು ಮೊದಲು ವಸತಿಗೂ ಊಟಕ್ಕೂ ಆಶ್ರಯಕೊಡಲಿಲ್ಲ. ಕಡೆಗೆ ಅವರು ಉತ್ತಮ ರೀತಿಯಲ್ಲಿ ಮಾತಾಡಲು ಬಾತುಕೋಳಿಯು ಮೊಟ್ಟೆಯನ್ನು ಜಾಗ್ರತೆಯಲ್ಲಿ ಇಡಲು ಹೋಟೆಲಿನವರಿಗೆ ಕೊಟ್ಟು, "ಈ ಬಾತುಕೋಳಿಯು ದಿವಸಕ್ಕೆ ಒಂದು ಮೊಟ್ಟೆಯಿಡುವುದು. ಇದನ್ನು ನಿಮಗೆ ಕೊಡುವೆವು. ನಮಗೆ ಆಶ್ರಯ ಕೊಡಿ," ಎಂದು ಕೇಳಲು ಹೋಟೆಲಿನ ಯಜಮಾನನು ಅವರಿಗೆ ಆಶ್ರಯ ಕೊಟ್ಟನು. ಅವರು ಆ ದಿನ ರಾತ್ರಿ ಅಲ್ಲಿ ಊಟಮಾಡಿ ಸುಖವಾಗಿ ಮಲಗಿದರು.

ಮರುದಿನ ಮುಂಜಾನೆ ಬೇಗನೆ ಎದ್ದು ತನ್ನ ಹೆಂಡತಿಯನ್ನು ಎಚ್ಚರಿಸಿ ಚಂದ್ರಗುಪ್ತನು ಮೊಟ್ಟೆಯನ್ನು ತೆಗೆದುಕೊಂಡು ಅದನ್ನು ತೂತುಮಾಡಿ ಇಬ್ಬರೂ ಕುಡಿದು ಚಿಪ್ಪನ್ನು ಎಸೆದರು. ನಂತರ ಸೂಜಿಯನ್ನು ಹೋಟೆಲಿನ ಯಜಮಾನನ ಕುರ್ಚಿಗೂ, ಮೊಳೆಯನ್ನು ಅವನ ಕೈವಸ್ತ್ರಕ್ಕೂ ಅಂಟಿಸಿದರು. ಬಾತುಕೋಳಿ ಅವರನ್ನು ನೋಡಲು ಹತ್ತಿರದ ಕೆರೆಯಲ್ಲಿ ಈಜಾಡಿತು. ಸುಮಾರು ಎರಡು ಗಂಟೆಗಳ ನಂತರ ಹೋಟೆಲಿನ ಯಜಮಾನನು ಕೈವಸ್ತ್ರದಲ್ಲಿ ಮುಖ ಉಜ್ಜಲು ಮೊಳೆಯು ಮುಖಕ್ಕೆ ತಾಗಿತು. ಅವನು ಅಡಿಗೆ ಕೋಣೆಗೆ ಓಡಿಹೋಗಿ ಬೆಂಕಿ ಉರಿಸಲು ತತ್ತಿಯ ಚಿಪ್ಪು ಅವನ ಕಣ್ಣುಗಳಿಗೆ ಹಾರಿ ಕಣ್ಣು ಕಾಣದಂತಾಯಿತು. ಆ ದಿನ ಬೆಳಿಗ್ಗೆಯಿಂದ ಉತ್ತಮ ರೀತಿಯ ಸನ್ನಿವೇಶಗಳನ್ನು ಕಾಣಲಿಲ್ಲ ಎನುತ್ತ ತನ್ನ ಕುರ್ಚಿಯಲ್ಲಿ ಬಂದು ಕುಳಿತನು. ಆಗ ಸೂಜಿಯು ನೇರಾಗಿ ಕುತ್ತಿತು. ಅವನ ನೋವು ತಲೆಗಿಂತ ಮೇಲೆ ಹಾರಿತು. ಬಹಳ ಸಿಟ್ಟು ಬಂತು; ಇಂತಹ ವಂಚನೆಯನ್ನು ಮಾಡಿದವರು ನಿನ್ನೆ ಬಂದ ದ್ರೋಹಿಗಳೆಂದು ತಿಳಿದು ಇನ್ನು ಮುಂದೆ ಅಂಥವರಿಗೆ ವಸತಿ ಕೊಡಲಾರೆನೆಂದು ನಿಶ್ಚಯಿಸಿದನು.

ಮತ್ತೊಂದು ದಿನ ಚಂದ್ರಗುಪ್ತನೂ ಮನೋರಮೆಯೂ ಒಟ್ಟಿಗೆ ಗಾಡಿ ಸವಾರಿ ಮಾಡಲು ಹವಣಿಸಿ ನರಿಯ ಮನೆಗೆ ಹೋಗುವುದೆಂದು

ನಿಶ್ಚಯಿಸಿದರು. ಚಂದ್ರಗುಪ್ತನು ನಾಲ್ಕು ಕೆಂಪು ಚಕ್ರದ ಒಂದು ಗಾಡಿಯನ್ನು ಕಟ್ಟಿದನು. ಅದನ್ನು ಎಳೆಯಲು ನಾಲ್ಕು ಇಲಿಗಳನ್ನು ನೇಮಿಸಿದನು. ಇಬ್ಬರೂ ಅದರಲ್ಲಿ ಕುಳಿತು ಹೊರಟರು. ಸ್ವಲ್ಪ ದೂರ ಹೋಗುವಷ್ಟರಲ್ಲೇ ಒಂದು ಬೆಕ್ಕು ಕಾಣಸಿಕ್ಕಿತು. "ನೀವು ಎಲ್ಲಿಗೆ ಹೋಗುವಿರಿ?" ಎಂದು ಬೆಕ್ಕು ಕೇಳಲು ಚಂದ್ರಗುಪ್ತನು, "ನಾವು ನರಿಯನ್ನು ಕಾಣಲು ಹೋಗುವೆವು," ಎಂದನು. "ನನ್ನನ್ನೂ ಕರೆದುಕೊಳ್ಳಿ," ಎಂದಿತು ಬೆಕ್ಕು. "ಹಿಂದಿನಿಂದ ಕುಳಿತುಕೊ, ಚಕ್ರಗಳಿಗೆ ಕೊಳೆಯಾಗದಂತೆ ನೋಡು," ಎಂದು ಬೆಕ್ಕಿನೊಡನೆ ಹೇಳಿದನು. "ಇಲಿಗಳೆ, ನೇರಾಗಿ ಹೋಗಿ," ಇಲಿಗಳೊಡನೆ ಹೇಳಿದನು. ಸ್ವಲ್ಪ ಸಮಯದ ನಂತರ ಒಂದು ಕಡಿಯುವ ಕಲ್ಲು, ಒಂದು ತತ್ತಿ, ಒಂದು ಬಾತು, ಮತ್ತು ಒಂದು ಮೊಳೆ ಬಂದುವು. ಅವುಗಳನ್ನು ಗಾಡಿಯಲ್ಲಿ ಕುಳ್ಳಿರಿಸಿದನು. ನರಿಯ ಮನೆಗೆ ಬರಲು ನರಿಯು ಹೊರಗೆ ಹೋಗಿತ್ತು. ಇಲಿಗಳು ಗಾಡಿಯು ಮನೆಯಲ್ಲಿ ಗಾಡಿಯನ್ನಿಟ್ಟುವು. ಚಂದ್ರಗುಪ್ತನೂ ಮನೋರಮೆಯೂ ಅಡ್ಡದಲ್ಲಿ ಹತ್ತಿ ಕುಳಿತರು, ಬೆಕ್ಕು ಒಲೆಯ ಹತ್ತಿರ ಕುಳಿತಿತು. ಬಾತುಕೋಳಿಯು ಕೆರೆಗೆ ಇಳಿಯಿತು. ಮೊಳೆ ತಲೆದಿಂಬಿನಲ್ಲಿ ನಿಂತಿತು. ಕಡಿಯುವ ಕಲ್ಲು ಬಾಗಿಲಿನ ಮೇಲೆ ಹತ್ತಿ ಕುಳಿತಿತು. ತತ್ತಿ ಕೈವಸ್ತ್ರದೊಳಗೆ ಸುತ್ತಿಕೊಂಡಿತು.

ನರಿಯು ಮನೆಗೆ ಬಂದು ಒಲೆಯ ಬದಿಗೆ ಬೆಂಕಿ ಹಚ್ಚಲು ಹೋಗಲು ಬೆಕ್ಕು ಅದರ ಕಣ್ಣಿಗೆ ಬೂದಿಯನ್ನು ಹಾರಿಸಿತು. ಅಡಿಗೆ ಕೋಣೆಯಿಂದ ಕಣ್ಣು ತೊಳೆಯಲು ಓಡಿತು. ತೊಳೆಯುವ ಕೆರೆಗೆ ಬರಲು ಬಾತು ನೀರನ್ನು ಹಾರಿಸಿತು. ಮುಖ ಉಜ್ಜಲು ಕೈವಸ್ತ್ರವನ್ನು ತೆಗೆದು ಮುಖ ಸವರಲು ತತ್ತಿಯೊಡೆದು ಅವನ ಮುಖ ಕಣ್ಣುಗಳಿಗೆ ತುಂಬ ತತ್ತಿಯ ನೀರು ಅಂಟಿತು. ಆಗ ಅದಕ್ಕೆ ಬಹಳ ಸಿಟ್ಟು ಬಂದು ಊಟವಿಲ್ಲದೆ ಹಾಸಿಗೆಗೆ ತೆರಳಿತು. ತಲೆದಿಂಬಿನಲ್ಲಿ ತನ್ನ ತಲೆಯನ್ನಿಡಲು ಮೊಳೆಯು ತನ್ನ ತಲೆಗೆ ಚುಚ್ಚಿತು. ಸಿಟ್ಟಿನಲ್ಲಿ ಹೊರಗೆ ಓಡಲು ಬಾಗಿಲಿನ ಒಳಗೆ ಬರಲು ಕಡಿಯುವ ಕಲ್ಲು ತಲೆಯ ಮೇಲೆ ಬಿದ್ದು ಆ ಸ್ಥಳದಲ್ಲೇ ಸತ್ತು ಬಿತ್ತು.

ಮತ್ತೊಂದು ದಿನ ಚಂದ್ರಗುಪ್ತನೂ ಮನೋರಮೆಯೂ ಒಟ್ಟಿಗೆ ಕಾಯಿಗಳನ್ನು ತಿನ್ನಲು ಹೋಗುವುದೆಂದು ನಿಶ್ಚಯಿಸಿ ಹೊರಟರು. ಪರ್ವತಕ್ಕೆ ಬಂದು ಕಾಯಿಗಳನ್ನು ಹೆಕ್ಕಲು ಪ್ರಾರಂಭಿಸಿದರು. ಸಿಕ್ಕಿದ ಕಾಯಿ

ಗಳಲ್ಲಿ ಸರಿಯಾಗಿ ಅರ್ಧಾಂಶ ಪಾಲು ಮಾಡಿಕೊಳ್ಳುವುದೆಂದು ನಿಶ್ಚಯಿಸಿದರು. ಮನೋರಮೆಗೆ ಹೆಚ್ಚು ಕಾಯಿಗಳು ಸಿಕ್ಕಿದುವು ಅವುಗಳನ್ನು ಅವಳು ಕೊಡದೆ ದೊಡ್ಡ ಕಾಯಿಗಳನ್ನು ತಿನ್ನಲು ಪ್ರಾರಂಭಿಸಿದಳು. ಒಂದು ಕಾಯಿಯು ಗಂಟಲಿನಲ್ಲಿ ಸಿಕ್ಕಿಕೊಳ್ಳಲು, "ಪ್ರಿಯ, ಒಂದು ಕಾಯಿ ಗಂಟಲಿನಲ್ಲಿ ಸಿಕ್ಕಿತು. ಗಂಟಲು ಕಟ್ಟುವುದು. ಹೊಳೆಯಿಂದ ನೀರು ತಂದು ಕೊಡಿ," ಎಂದಳು. ಚಂದ್ರಗುಪ್ತನು ಹೊಳೆಯ ಬದಿಗೆ ಓಡಿ, "ಸ್ವಲ್ಪ ನೀರು ಕೊಡು, ನನ್ನ ಹೆಂಡತಿ ಗಂಟಲು ಕಟ್ಟಿ ಸಾಯುವಳು," ಎನಲು, ಹೊಳೆಯು, "ಹಾಗಾದರೆ ನಿನ್ನ ಹೆಂಡತಿಯ ರೇಶ್ಮೆಯ ಬಟ್ಟೆಯ ಒಂದು ತುದಿಯನ್ನು ಹರಿದು ತಾ. ಅದರಲ್ಲಿ ನೀರನ್ನು ಕೊಂಡುಹೋಗಬಹುದು," ಎಂದಿತು. ಚಂದ್ರಗುಪ್ತನು ಮನೋರಮೆಯಿದ್ದಲ್ಲಿಗೆ ಬಂದು, "ನೀರನ್ನು ತರಲು ರೇಶ್ಮೆಯ ತುದಿಯನ್ನು ತುಂಡುಮಾಡಿ ಕೊಡು," ಎಂದನು. ಆಗ ಮನೋರಮೆಯು, "ತೋಟದಲ್ಲಿ ಹೂಮಾಲೆಯನ್ನು ಬಿಟ್ಟಿರುವೆನು, ಅದನ್ನು ತನ್ನಿ. ಆನಂತರ ರೇಶ್ಮೆಯ ತುಂಡನ್ನು ಕೊಡುವೆನು," ಎಂದಳು. ಚಂದ್ರಗುಪ್ತನು ಓಡಿಹೋಗಿ ಹೂಮಾಲೆಯನ್ನು ತಂದನು. ಆನಂತರ ರೇಶ್ಮೆಯ ತುಂಡನ್ನು ತೆಗೆದುಕೊಂಡು ನೀರನ್ನು ತರಲುಹೋದನು. ಹೊಳೆಯು ಅವನಿಗೆ ನೀರನ್ನು ಕೊಟ್ಟಿತು. ನೀರು ತೆಗೆದುಕೊಂಡು ಬರುವಷ್ಟರಲ್ಲಿ ಮನೋರಮೆಯ ಗಂಟಲುಕಟ್ಟಿ ಉಸಿರಾಡದೆ ಮಲಗಿದ ಸ್ಥಳದಿಂದ ಅಲುಗಾಡದಾದಳು.

ಚಂದ್ರಗುಪ್ತನು ಮನೋರಮೆಯು ಸತ್ತುಹೋಗಲು ಬಹಳ ಬೇಸರಪಟ್ಟನು ಮತ್ತು ಗಟ್ಟಿಯಾಗಿ ಅತ್ತನು. ಎಲ್ಲಾ ಪ್ರಾಣಿಗಳು ಕೂಗಿದುವು. ಆರು ಇಲಿಗಳು ಶವವಾಹನವನ್ನು ಕಟ್ಟಿ ಹೊರಲು ಸಿದ್ಧವಾದುವು. ದಾರಿಯಲ್ಲಿ ಒಂದು ನರಿಯು ಕಾಣಸಿಕ್ಕಿ, "ನೀವು ಎಲ್ಲಿಗೆ ಹೋಗುವಿರಿ?" ಎಂದು ಕೇಳಿತು. "ನನ್ನ ಹೆಂಡತಿ ಮನೋರಮೆಯನ್ನು ಸುಡಲು ಕೊಂಡೊಯ್ಯುವೆನು," ಎಂದನು ಚಂದ್ರಗುಪ್ತ. "ನನ್ನನ್ನೂ ಗಾಡಿಯಲ್ಲಿ ಕುಳ್ಳಿರಿಸಿ," ಎಂದು ನರಿಯು ಹೇಳಲು, "ನೀನು ಹಿಂಬದಿಯಲ್ಲಿ ಕುಳಿತುಕೊಳ್ಳಬೇಕು. ಅಲ್ಲವಾದರೆ ಕುದುರೆಗಳಿಗೆ ಎಳೆಯಲು ಸಾಧ್ಯವಾಗಲಾರದು," ಎಂದನು. ಹಾಗೆ ನರಿಯು ಹಿಂಬದಿಯಿಂದ ಹತ್ತಿತು ಮತ್ತು ಆಗಲೇ ತೋಳವೂ, ಕರಡಿಯೂ, ಆಡೂ, ಗುಡ್ಡದ ಪ್ರಾಣಿಗಳೆಲ್ಲವೂ ಬಂದು ಶವ ಪೆಟ್ಟಿಗೆಯ ಮೇಲಕ್ಕೆ ಹತ್ತಿದುವು. ಹೀಗೆ ಮುಂದಕ್ಕೆ ಹೋಗಲು ಒಂದು ತೋಡು ಕಾಣಸಿಕ್ಕಿತು.

"ಈ ತೋಡನ್ನು ಹೇಗೆ ದಾಟಬಹುದು ?" ಎಂದು ಚಂದ್ರಗುಪ್ತ ಕೇಳಿದನು. ಆಗ ಒಂದು ಹುಲ್ಲು ಕಾಣಸಿಕ್ಕಿತು. ಅದು, "ನಾನು ತೋಡಿಗೆ ಅಡ್ಡ ನಿಲ್ಲುವೆನು. ನನ್ನ ಮೇಲೆ ಗಾಡಿಯನ್ನು ಕೊಂಡು ಹೋಗಬಹುದು," ಎಂದಿತು. ಅದರ ಮೇಲೆ ಹೋಗುವಷ್ಟರಲ್ಲಿ ಇಲಿಗಳು ನೀರಿಗೆ ಬಿದ್ದು ಮುಳುಗಿದುವು. ಅಷ್ಟರಲ್ಲಿ ಒಂದು ಮರದ ಕೊರಡು ಬಂದು, "ನಾನು ತೋಡಿಗೆ ಅಡ್ಡಕಟ್ಟುವೆನು. ನನ್ನ ಮೇಲೆ ಗಾಡಿ ಹೋಗಬಹುದು," ಎಂದಿತು. ಗಾಡಿಯು ಮರದ ಕೊರಡಿಗೆ ಮುಟ್ಟಿದ ಕೂಡಲೇ ಅದು ನೀರಿಗೆ ಬಿದ್ದು ನೀರಿನಲ್ಲಿ ತೇಲಿ ಹೋಯಿತು. ಆಗ ಅಲ್ಲೇ ಇದ್ದ ಒಂದು ಕಲ್ಲು ತಾನು ನೀರಿಗೆ ಅಡ್ಡ ನಿಲ್ಲುವುದೆಂದಿತು. ಅದರ ಮೇಲೆ ಗಾಡಿಯನ್ನು ಕೊಂಡೊಯ್ದು ಮನೋರಮೆಯ ಶವವನ್ನು ಪೆಟ್ಟಿಗೆಯಿಂದ ತೆಗೆಯಲು ಸಾಧ್ಯವಾಯಿತು. ಗಾಡಿಯು ಭಾರವಿದ್ದು ಮತ್ತೊಂದು ದಡಮುಟ್ಟುವಷ್ಟರಲ್ಲಿ ನರಿ, ಮತ್ತಿತರ ದುಃಖಿಸುತ್ತಿದ್ದ ಪ್ರಾಣಿಗಳೆಲ್ಲವೂ ನೀರಿಗೆ ಬಿದ್ದು ಮುಳುಗಿದುವು. ಮತ್ತೊಂದು ದಡದಲ್ಲಿ ಚಂದ್ರಗುಪ್ತನೂ ಮನೋರಮೆಯೂ ಮಾತ್ರ ಉಳಿದಿದ್ದರು. ಮನೋರಮೆಯ ಶವವನ್ನು ಸುಟ್ಟು ಆ ಸ್ಥಳದಲ್ಲಿ ಸಂಸ್ಕಾರವನ್ನು ಮುಗಿಸಿದನು. ಅಲ್ಲಿ ಬೇರೆ ಯಾರೂ ಉಳಿಯದಿರಲು ಬಹಳ ದುಃಖದಿಂದ ಮರುಗಿ ತನ್ನ ಅಂತ್ಯವನ್ನು ಅನುಭವಿಸಿದನು. ಹೀಗೆ ಅವರೆಲ್ಲರೂ ಸತ್ತುಹೋದರು.

೮. ಅದೃಷ್ಟಶಾಲಿ ಮೂವರು ಮಕ್ಕಳು

ಒಂದಾನೊಂದು ಸಮಯ ಒಬ್ಬ ತಂದೆಯು ತನ್ನ ಮೂವರು ಮಕ್ಕಳನ್ನು ಕರೆದು ಹಿರಿಯವನಿಗೆ ಒಂದು ಕೋಳಿ ಎರಡನೆಯವನಿಗೆ ಒಂದು ಹಲ್ಲಿ ಕತ್ತಿ ಮತ್ತು ಮೂರನೆಯವನಿಗೆ ಒಂದು ಬೆಕ್ಕನ್ನು ಕೊಟ್ಟು, "ನನ್ನ ಅಂತ್ಯವು ಹತ್ತಿರಬರುತ್ತಿದೆ. ನನ್ನಲ್ಲಿರುವುದನ್ನು ನಿಮಗೆ ಕೊಟ್ಟಿರುವೆನು. ಇನ್ನು ಏನಾದರೂ ಆಸ್ತಿ ಪಡೆಕೊಳ್ಳಿ. ನಿಮ್ಮ ಅದೃಷ್ಟವನ್ನು ನೀವು ನೋಡಿಕೊಳ್ಳಿ, ಎಂದನು.

ತಂದೆಯು ಸತ್ತುಹೋದ ನಂತರ ಹಿರಿಯ ಮಗನು ಕೋಳಿಯನ್ನು ತೆಗೆದುಕೊಂಡು ಊರೂರು ಸುತ್ತಲು ಪ್ರಾರಂಭಿಸಿದನು. ಹೀಗೆ ಸುತ್ತಲು ಎಲ್ಲಾ ಕಡೆಯಲ್ಲೂ ಇಂಗ್ರೋಜಿಗಳ ತುದಿಯಲ್ಲಿ ಕೋಳಿಯು ಇಡಲ್ಪಟ್ಟಿತ್ತು. ಇತರ ಕಡೆಗಳಲ್ಲೂ ಅನೇಕ ಕೋಳಿಗಳಿದ್ದು ತನ್ನ ಕೋಳಿಯಿಂದ ಆತನಿಗೆ ಏನೂ ಉಪಕಾರವಾಗಲಿಲ್ಲ. ಅಂತೂ ಅವನು ಒಂದು ದ್ವೀಪಕ್ಕೆ ಬಂದನು. ಅಲ್ಲಿ ಕೋಳಿಗಳಿರಲಿಲ್ಲ. ಕೋಳಿಗಳನ್ನು ನೋಡದಿರಲು ಹಿರಿಯ ಮಗನು ತನ್ನ ಕೋಳಿಯಿಂದ ತುಂಬಾ ಪ್ರಯೋಜನವಿದೆಯೆಂದು ಗ್ರಹಿಸಿ ಆ ದ್ವೀಪದಲ್ಲಿ ವಾಸಿಸುವವರನ್ನು ಕರೆದು, "ನನ್ನಲ್ಲಿ ಒಂದು ಕೋಳಿ ಇದೆ. ನಿಮಗೆ ತುಂಬಾ ಪ್ರಯೋಜನವಾಗಬಹುದು. ರಾತ್ರಿಯ ಸಮಯ ಮೂರು ಸರ್ತಿ ಗಂಟೆಗೆ ಸರಿಯಾಗಿ ಕೂಗುವುದು ಮತ್ತು ಸೂರ್ಯೋದಯದ ಸಮಯಕ್ಕೆ ಕೂಗುವುದು. ಕೆಲವು ಸರ್ತಿ ಹಗಲು ಹೊತ್ತಿಗೆ ಕೂಗುವುದು. ಆಗ ಹವೆಯು ಬದಲಾಗಿರುವುದೆಂದು ಅರ್ಥವಾಗುವುದು. ಅಲ್ಲಿಯ ಜನರಿಗೆ ಬೆಳಿಗ್ಗೆ ಮತ್ತು ಸಂಜೆಯಾಗುವುದು ಮಾತ್ರ ತಿಳಿದಿತ್ತು ಮತ್ತು ರಾತ್ರಿ ಸಮಯದ ಅರಿವಿರಲಿಲ್ಲ. ಕೋಳಿಯು ರಾತ್ರಿ ಹೊತ್ತು ಸಮಯವನ್ನು ತಿಳಿಸುವುದನ್ನು ನೋಡಲು ಅವರೆಲ್ಲರೂ ಸೇರಿ ಇಡೀ ರಾತ್ರಿಯನ್ನು ಕಳೆದರು. ಅದು ಸಮಯಕ್ಕೆ ಸರಿಯಾಗಿ ಎರಡು ಗಂಟೆ, ನಾಲ್ಕು ಗಂಟೆ ಮತ್ತು ಆರು ಗಂಟೆಗೆ ಕೂಗಿತು. ಇದನ್ನು ನೋಡಿ ಸಂತೋಷಪಟ್ಟು, "ಕೋಳಿಯನ್ನು ನಾವು ಕೊಂಡುಕೊಳ್ಳುತ್ತೇವೆ. ಅದಕ್ಕೆ ಎಷ್ಟು ಹಣ ಕೊಡಬೇಕು?" ಎಂದು ಕೇಳಿದರು. ಹಿರಿಯವನು, "ಒಂದು ಕತ್ತೆ ಹೊರುವಷ್ಟು ಬಂಗಾರ

ವನ್ನು ಕೊಡಬೇಕು," ಎಂದನು "ಸರಿಯಾದಕ್ರಯ," ಎಂದು ಎಲ್ಲರೂ ಒಟ್ಟಿಗೆ ಕೂಗಿ ಅವನು ಹೇಳಿದಷ್ಟನ್ನು ಕೊಡಲು ಒಪ್ಪಿದರು.

ಹಿರಿಯ ಮಗನು ಮನೆಗೆ ಬರಲು ಅವನು ತಂದ ಐಶ್ವರ್ಯವನ್ನು ನೋಡಿ ಅವನ ಸಹೋದರರು ತುಂಬಾ ಆಶ್ಚರ್ಯಪಟ್ಟರು. ಹೀಗೆ ಎರಡನೆಯವನು ತನ್ನ ಕತ್ತಿಯನ್ನು ತೆಗೆದುಕೊಂಡು ಹೊರಟನು ಅವನು ಹೋದ ಕಡೆಗಳಲ್ಲೆಲ್ಲಾ ಕತ್ತಿಯನ್ನು ಉಪಯೋಗಿಸುತ್ತಿದ್ದರು ತನ್ನ ಕತ್ತಿಯಿಂದ ಏನೂ ಪ್ರಯೋಜನವಾಗಲಿಲ್ಲ. ಕಡೆಗೆ ಒಂದು ಊರಿಗೆ ಬರಲು ಅಲ್ಲಿ ಗದ್ದೆಯಿಂದ ಬೆಳೆಯನ್ನು ಕೈಯಲ್ಲಿ ಕೀಳುತ್ತಿದ್ದರು. ಹೀಗೆ ಧಾನ್ಯವೆಲ್ಲಾ ಗದ್ದೆಗೆ ಬಿದ್ದು ತುಂಬಾ ನಷ್ಟವಾಗುತ್ತಿತ್ತು. ಎರಡನೆಯವನಿಗೆ ಈಗ ಭಾಗ್ಯವು ಬಂದೊದಗಿತು. ಅವರ ಬೆಳೆಯನ್ನು ಸ್ವಲ್ಪವೇ ಸಮಯದಲ್ಲಿ ಧಾನ್ಯವು ಬಿದ್ದುಹೋಗದಂತೆ ತನ್ನ ಕತ್ತಿಯಿಂದ ಕೊಯಿದು ತೋರಿಸಿದನು. ಅವರೆಲ್ಲರೂ ಬಾಯಿಬಿಟ್ಟು ಆಶ್ಚರ್ಯಚಕಿತರಾಗಿ ನಿಂತು ನೋಡಿದರು. "ಆ ಕತ್ತಿಯನ್ನು ಕೊಡುವುದಿದ್ದರೆ ನೀನು ಹೇಳಿದಷ್ಟು ಹಣ ಕೊಡುತ್ತೇವೆ, ಎಂದರು. ಹೀಗೆ ಎರಡನೆಯವನು ತನಗೆ ಬೇಕಾದಷ್ಟು, ಒಂದು ಕುದುರೆ ಹೊರುವಷ್ಟು ಬಂಗಾರವನ್ನು ತೆಗೆದುಕೊಂಡು ಮನೆಗೆ ಬಂದನು.

ಈಗ ಮೂರನೆಯವನು ಅವರಿಬ್ಬರು ತಂದ ಐಶ್ವರ್ಯವನ್ನು ನೋಡಿ ತಾನು ಸಂಪತ್ತನ್ನು ತರಬೇಕೆಂದು ಗ್ರಹಿಸಿ ತನ್ನ ಬೆಕ್ಕನ್ನು ತೆಗೆದುಕೊಂಡು ಹೊರಟನು. ಮುಖ್ಯ ಪಟ್ಟಣಕ್ಕೆ ಬರಲು ಅಲ್ಲಿ ಅನೇಕ ಬೆಕ್ಕುಗಳಿದ್ದವು. ಅವರೆಲ್ಲರೂ ಬೆಕ್ಕುಗಳಿಗೆ ಮರಿಗಳು ಹುಟ್ಟಿದ ಕೂಡಲೇ ನೀರಿಗೆ ಮುಳುಗಿಸಿ ಕೊಲ್ಲುತ್ತಿದ್ದರು. ಇಲ್ಲಿ ಮೂರನೆಯವನಿಗೆ ತನ್ನ ಬೆಕ್ಕಿನಿಂದ ಏನೂ ಪ್ರಯೋಜನ ಸಿಗಲಿಲ್ಲ. ಅವನು ಕಡೆಗೆ ಒಂದು ದ್ವೀಪಕ್ಕೆ ಬಂದನು. ಆ ಜನರಿಗೆ ಇಲಿಗಳ ಕಾಟ ಬಹಳವಾಗಿತ್ತು. ಮನೆಯ ಯಜಮಾನನಿದ್ದರೂ ಇಲ್ಲದಿದ್ದರೂ ಮೇಜಿನ ಮೇಲೆ, ಕುರ್ಚಿಯ ಮೇಲೆ ಹಾರಾಡುತ್ತಿದ್ದುವು. ಅವರು ಅದಕ್ಕಾಗಿ ರಾಜನೊಡನೆ ದೂರು ಕೊಟ್ಟಿದ್ದರು. ಅವರನ್ನು ಸಮಾಧಾನ ಪಡಿಸಲು ರಾಜನಿಗೆ ಸಾಧ್ಯವಾಗದೆ ಅವನು ಚಿಂತಾಕ್ರಾಂತನಾಗಿದ್ದನು. ಮೂರನೆಯ ಮಗನು ತನ್ನ ಬೆಕ್ಕನ್ನು ಬಿಡಲು ಅದು ಕೂಡಲೇ ಎರಡು ಕೋಣೆಗಳಲ್ಲಿದ್ದ ಇಲಿಗಳನ್ನೆಲ್ಲಾ ಹಿಡಿದು ತಿಂದಿತು. ಇದನ್ನು ನೋಡಿ ದ್ವೀಪದ ಜನರು ಎಷ್ಟು ಕ್ರಯ ಬಾಳುವುದಾದರೂ

ಬೆಕ್ಕನ್ನು ಕೊಂಡು ಕೊಳ್ಳಬೇಕೆಂದು ರಾಜನೊಡನೆ ಹೇಳಿದರು. ಹೀಗೆ ಒಂದು ಹೇಸರ ಕತ್ತೆ ಹೊರವಷ್ಟು ಬಂಗಾರವನ್ನೂ ವಜ್ರಗಳನ್ನೂ ತೆಗೆದುಕೊಂಡು ಮನೆಗೆ ಬಂದನು. ಇತರ ಸಹೋದರರಿಗಿಂತಲೂ ಹೆಚ್ಚಿನ ಐಶ್ವರ್ಯವುಳ್ಳವನಾಗಿದ್ದನು.

ಅಷ್ಟರಲ್ಲಿ ಬೆಕ್ಕು ತನಗೆ ಬೇಕಾದಷ್ಟು ಇಲಿಗಳನ್ನು ತಿಂದು ಬಹಳ ಬಾಯಾರಿ ಸುಮ್ಮನೆ ಕುಳಿತು ತಲೆಯನ್ನು ಮೇಲಕ್ಕೆತ್ತಿ, "ಮಿಯೋಂ, ಮಿಯೋಂ", ಎಂದು ಕೂಗಿತು. ದ್ವೀಪದ ಜನರೆಲ್ಲಾ ಅದನ್ನು ಕೇಳಿ ಓಡಿ ಬಂದು ಬಹಳ ಹೆದರಿ, ತಮಗೆ ಇಲಿಗಳ ಕಾಟವಾದರೂ ಆಗ ಬಹುದಿತ್ತು; ಈ ಬೆಕ್ಕು ನಮ್ಮ ಪ್ರಾಣಕ್ಕೆ ಅನಿಷ್ಟವನ್ನುಂಟು ಮಾಡಬಹುದು ಎಂದು ಗ್ರಹಿಸಿ ರಾಜನಿಗೆ ದೂರುಕೊಟ್ಟರು ರಾಜನು ಅರಮನೆಯ ಸೇವಕ ಹುಡುಗನನ್ನು ಕಳುಹಿಸಿ,"ಅದನ್ನು ಅರಮನೆಯಿಂದ ತೊಲಗಲು ಹೇಳು" ಎನಲು ಹುಡುಗನು ಹಾಗೆ ಹೇಳಲು ಬೆಕ್ಕು ತನ್ನ ಬಾಯಾರಿಕೆಯನ್ನು ತಿಳಿಸಲು ಸಾಧ್ಯವಾಗದೆ ಪುನಃ, "ಮಿಯೋಂ, ಮಿಯೋಂ," ಎಂದು ಕೂಗಿತು. ಹುಡುಗನು ಅದು, ಇಲ್ಲ ಇಲ್ಲ, ಎನ್ನುವುದೆಂದು ಗ್ರಹಿಸಿ ರಾಜನೊಡನೆ ಹಾಗೆ ಬಂದು ಹೇಳಿದನು. ರಾಜನೂ ಅವನ ಸೈನಿಕರೂ ಸಿಟ್ಟುಗೊಂಡರು ಸೈನಿಕರು ಒಟ್ಟು ಸೇರಿ ನಾವು ಅದನ್ನು ಸಾಧ್ಯವಾದಷ್ಟು ಶಕ್ತಿ ಉಪಯೋಗಿಸಿ ಓಡಿಸಬೇಕೆಂದು ನಿರ್ಣಯಿಸಿದರು. ಅವರೆಲ್ಲರೂ ತಮ್ಮ ಕೋವಿಗಳನ್ನು ತೆಗೆದುಕೊಂಡು ಗುಂಡುಹಾರಿಸಲು ಪ್ರಾರಂಭಿಸಿದರು. ಕಡೆಗೆ ಬೆಕ್ಕಿರುವ ಕೋಣೆಗೂ ಗುಂಡು ಹಾರಿತು. ಬೆಕ್ಕು ಕಿಟಕಿಯ ಮೂಲಕ ಹೊರಗೆ ಹಾರಿ ಓಡಿ ಹೋಯಿತು. ಆದರೆ ಸೈನಿಕರು ಅದನ್ನು ನೋಡದೆ ಮತ್ತೂ ಗುಂಡು ಹಾರಿಸುತ್ತಲೇ ಇದ್ದರು. ಹೀಗೆ ಗುಂಡು ಹಾರಿಸಲು ಅರಮನೆಯಿಡೀ ಸುಟ್ಟಿತು.

೯. ಚೆನ್ನ ಮತ್ತು ಸುಬ್ಬಿ

ಒಂದು ಊರಿನಲ್ಲಿ ಚೆನ್ನನೆಂಬವನೊಬ್ಬನಿದ್ದನು. ಅವನ ಹೆಂಡತಿಯ ಹೆಸರು ಸುಬ್ಬಿ. ಅವರಿಗೆ ಮದುವೆಯಾಗಿ ಕೆಲವೇ ದಿನಗಳು ಕಳೆದು ಹೋಗಿದ್ದುವು. ಚೆನ್ನನು ಸುಬ್ಬಿಯನ್ನು ಕರೆದು, "ಸುಬ್ಬಿ, ನಾನು ಗದ್ದೆಯಲ್ಲಿ ಕೆಲಸ ಮಾಡಿ ಬರುತ್ತೇನೆ. ಚೆನ್ನಾಗಿ ಅಡಿಗೆಮಾಡಿ ಇಡು," ಎಂದನು. "ಸರಿ; ತಯಾರುಮಾಡಿ ಇಡುವೆನು," ಎಂದಳು ಸುಬ್ಬಿ. ಚೆನ್ನನು ಗದ್ದೆಗೆ ಹೋದನು. ಸುಬ್ಬಿಯು ಮನೆಯಲ್ಲಿದ್ದ ಮಾಂಸದ ತುಂಡನ್ನು ಬೇಯಿಸಲು ಪ್ರಾರಂಭಿಸಿದಳು. ಅದು ಕಾದು ಕೆಂಪಗಾಯಿತು. ಅದಕ್ಕೆ ಹೆಂಡವನ್ನು ಸೇರಿಸಲು ಒಂದು ಹೂಜಿಯನ್ನು ತೆಗೆದುಕೊಂಡು ಹೆಂಡದ ಪಿಪಾಯಿಯ ಮುಚ್ಚಳ ತೆರೆಯಲು ಹೆಂಡ ಹೂಜಿಗೆ ಸುರಿಯಲು ಪ್ರಾರಂಭಿಸಿತು. ಅಷ್ಟರಲ್ಲಿ ಸುಬ್ಬಿ, "ನಾಯಿಯನ್ನು ಕಟ್ಟಲಿಲ್ಲ. ಹೊರಗಿನಿಂದ ನಾಯಿ ಬಂದು ಬೇಯಿಸಿದ ಮಾಂಸವನ್ನು ತಿಂದು ಬಿಡಬಹುದು," ಎಂದು ಗ್ರಹಿಸಿ ಅಡಿಗೆಕೋಣೆಯಿಂದ ಹೊರಗೆ ಓಡಿದಳು. ಅದಾಗಲೇ ಕೆಟ್ಟ ನಾಯಿಯು ಮಾಂಸವನ್ನು ಕಚ್ಚಿಕೊಂಡು ಓಡಲು ಪ್ರಾರಂಭಿಸಿತು. ಸುಬ್ಬಿಯು ನಾಯಿಯ ಹಿಂದೆ ಓಡಿದಳು. ನಾಯಿಯು ಮತ್ತೂ ಓಡಿತು. ಹೀಗೆ ಸುಬ್ಬಿಯೂ ನಾಯಿಯೂ ಗದ್ದೆಯಲ್ಲಿ ಓಡಿದರು. ನಾಯಿಯು ಅವಳಿಗಿಂತ ಜೋರಾಗಿ ಓಡಲು, 'ಗುಣವಾಗದಿದ್ದುದನ್ನು ಸಹಿಸಬೇಕು,' ಎಂದಳು ಸುಬ್ಬಿ ಮತ್ತೆ ಹಿಂದಕ್ಕೆ ತಿರುಗಿ ಮೆಲ್ಲನೆ ಸಮಾಧಾನಪಟ್ಟುಕೊಳ್ಳಲು, ಮನೆಯ ಕಡೆಗೆ ನಡೆದಳು. ಹಿಂತಿರುಗಿ ಮನೆಗೆ ಬಂದು ನೋಡಲು ಪಿಪಾಯಿಯಿಂದ ಹೆಂಡವೆಲ್ಲಾ ನೆಲದ ಮೇಲೆ ಸುರಿದು ಹರಡಿತ್ತು. "ನನ್ನ ಗ್ರಹಚಾರವೆ, ಗಂಡನು ಈ ಕೆಸರನ್ನು ನೋಡಿ ಸಹಿಸುವುದನ್ನು ಹೇಗೆ ನೋಡಲಿ?" ಎಂದಳು. ಸ್ವಲ್ಪ ಹೊತ್ತು ಆಲೋಚಿಸಿದಳು. ಕೆಲವು ದಿನಗಳ ಹಿಂದೆ ತಂದ ಹಿಟ್ಟಿನ ಚೀಲವು ನೆನಪಿಗೆ ಬಂದು ಅದನ್ನು ನೆಲದ ಮೇಲೆ ಸುರಿದರೆ ಹೆಂಡವನ್ನೆಲ್ಲಾ ಹಿಟ್ಟು ಹೀರುವುದು ಎಂದು ಗ್ರಹಿಸಿ, "ಹಿಟ್ಟನ್ನು ಇದು ತನಕ ಇಟ್ಟುಕೊಳ್ಳಲು ನಾನೆಷ್ಟು ಅದೃಷ್ಟಶಾಲಿ!" ಎಂದು ಚೀಲವನ್ನು ಹೂಜಿಯ ಬದಿಯಲ್ಲಿ ಸುರಿದಳು. ಹಿಟ್ಟೆಲ್ಲಾ ಸುರಿಯಲು ಪ್ರಾರಂಭಿಸಿ ಹೂಜಿಯೂ ಮಗುಚಿ ಹೆಂಡವು

ಮತ್ತೂ ಹರಡಿತು. "ಒಂದು ಹೋಗಲು ಮತ್ತೊಂದು ಹಿಂಬಾಲಿಸು ವುದು," ಎಂದು ಹಿಟ್ಟನ್ನು ಮತ್ತೂ ಹರಡಿದಳು ಹೆಂಡವೂ ಹಿಟ್ಟೂ ಒಟ್ಟು ಸೇರಿ ನೆಲದ ಮೇಲೆಲ್ಲಾ ಚೆಲ್ಲಲು ಸುಬ್ಬಿಯು, "ಇದೆಷ್ಟು ಸರಿ ಯಾಗಿ ಶುಚಿಯಾಗಿ ಕಾಣುವುದು!" ಎಂದಳು. "ಸುಬ್ಬಿ, ಸುಬ್ಬಿ, ನೀನು ಯಾಕೆ ಆ ಮಾಂಸದ ತುಂಡನ್ನು ಕೆಂಡದಲ್ಲಿ ಹುರಿದು, ಹೆಂಡವನ್ನು ನೆಲಕ್ಕೆ ಚೆಲ್ಲಲು ಬಿಟ್ಟು ಊಟವನ್ನು ಹಾಳುಮಾಡಿದಿ?" ಎಂದನು ಚೆನ್ನ. "ನಾನು ತಪ್ಪು ಮಾಡುವೆನೆಂದು ನನಗ ತಿಳಿದಿರಲಿಲ್ಲ. ನೀವು ನನಗೆ ಮೊದಲೇ ಹೇಳಬೇಕಿತ್ತು," ಎಂದಳು ಸುಬ್ಬಿ.

"ನನ್ನ ಹೆಂಡತಿಯು ಈ ರೀತಿ ಮಾಡಿದರೆ ನಾನು ಬಹಳ ಜಾಗ್ರತೆ ವಹಿಸಬೇಕು," ಎಂದು ತನ್ನಲ್ಲಿದ್ದ ತುಂಬಾ ಬಂಗಾರವನ್ನು ಗ್ರಹಿಸಿ,— "ಸುಬ್ಬಿ, ಆ ಅರಸಿನ ಗುಬ್ಬಿಗಳು, ನೋಡು, ಅವುಗಳನ್ನು ಪೆಟ್ಟಿಗೆಯಲ್ಲಿ ಹಾಕಿ ತೋಟದಲ್ಲಿ ಹುಗಿಯುತ್ತೇನೆ. ನೀನು ಅವುಗಳನ್ನು ಜಾಗ್ರತೆ ನೋಡು, ಮತ್ತು ಅವುಗಳನ್ನು ಹಾಳುಗೈಯಬೇಡ," ಎಂದನು. ಆಗ ಸುಬ್ಬಿಯು, "ಸರಿ; ನಾನೆಂದಿಗೂ ಅವುಗಳನ್ನು ಹಾಳುಮಾಡುವುದಿಲ್ಲ," ಎಂದಳು" ಚೆನ್ನನು ಅಲ್ಲಿಂದ ಹೋದ ಕೂಡಲೇ ಅಲ್ಲಿಗೆ ಕೆಲವು ಪಿಂಗಾಣಿ ವ್ಯಾಪಾರಸ್ಥರು ತಟ್ಟೆ ಮತ್ತು ಗ್ಲಾಸುಗಳನ್ನು ಹೊತ್ತುಕೊಂಡು ಬಂದರು. ಅವುಗಳಲ್ಲಿ ಚಂದವಾದವುಗಳನ್ನು ತೋರಿಸಲು, ಸುಬ್ಬಿಯು ಅವುಗಳನ್ನು ಕೊಂಡುಕೊಳ್ಳಲು ಆಸೆಯುಳ್ಳವಳಾಗಿ, "ಬಂಗಾರದ ಗುಬ್ಬಿಗಳನ್ನು ತೋಟದಲ್ಲಿ ಹೂತಿಟ್ಟಿದೆ; ಅವುಗಳನ್ನು ತೆಗೆದುಕೊಂಡು ಈ ಸಾಮಾನು ಗಳನ್ನು ಕೊಡಿ, ನಾನೇ ಅಲ್ಲಿಗೆ ಹೋಗುವುದಕ್ಕೆ ಧೈರ್ಯ ಸಾಲದು," ಎಂದಳು. ವ್ಯಾಪಾರಸ್ಥರು ಅವುಗಳನ್ನೆಲ್ಲಾ ಅಗಿದು ತೆಗೆದು ಅವರು ತಂದ ಸಾಮಾನುಗಳನ್ನೆಲ್ಲಾ ಸುಬ್ಬಿಯೊಡನೆ ಕೊಟ್ಟರು.

ಚೆನ್ನನು ಬರಲು ಸುಬ್ಬಿಯು, "ಬಂಗಾರದ ಗುಬ್ಬಿಗಳನ್ನು ಕೊಟ್ಟು ಈ ಸಾಮಾನುಗಳನ್ನು ಕೊಂಡುಕೊಂಡೆನು. ನಾನೇ ಅವುಗಳನ್ನು ಮುಟ್ಟ ಲಿಲ್ಲ," ಎಂದಳು. ಆಗ ಚೆನ್ನನು, "ಏನು ಮಾಡಿದೆ? ಅವುಗಳೆಲ್ಲಾ ನನ್ನ ಹಣದ ನಿಧಿ. ನೀನು ಹೀಗೆ ಏಕೆ ಮಾಡಿದೆ?" ಎಂದನು. ಅದಕ್ಕೆ ಸುಬ್ಬಿಯು, "ನನಗೆ ಅದು ತಿಳಿದಿರಲಿಲ್ಲ, ನೀವು ನನಗೆ ಮೊದಲೇ ಹೇಳ ಬೇಕಿತ್ತು," ಎಂದಳು.

ಸುಬ್ಬಿ ಸ್ವಲ್ಪ ಸಮಯ ಧ್ಯಾನಿಸಿ, "ನಿಲ್ಲಿ, ಪ್ರಿಯ, ನಾವು ಕೂಡಲೇ ಅವರನ್ನು ಹಿಂಬಾಲಿಸಿ ಆ ಬಂಗಾರವನ್ನು ತೆಗೆದುಕೊಳ್ಳುವ," ಎಂದು ಹೇಳಿದಳು ಹೀಗೆ ಅವರಿಬ್ಬರೂ ದಾರಿಯಲ್ಲಿ ತಿನ್ನಲು ದೋಸೆ ಮತ್ತು ಬೆಣ್ಣೆಗಳನ್ನು ತೆಗೆದುಕೊಂಡು ವ್ಯಾಪಾರಸ್ಥರ ಹಿಂದೆ ಓಡಿದರು. ಚೆನ್ನನು ಸ್ವಲ್ಪ ಮುಂದಕ್ಕೆ ಓಡಲು ಸುಬ್ಬಿಯು ಹಿಂದೆ ಉಳಿಯಲು, "ತೊಂದರೆಯಿಲ್ಲ; ಮನೆಗೆ ಹಿಂತಿರುಗುವಾಗ ನಾನು ಅವರಿಗಿಂತ ಮೊದಲು ಮುಟ್ಟುವೆನು," ಎಂದುಕೊಂಡಳು ಸುಬ್ಬಿ.

ಈಗ ಸುಬ್ಬಿಯು ತನ್ನ ಗಾಡಿಯಲ್ಲಿ ಗುಡ್ಡದ ತುದಿಗೆ ಬಂದು ಮುಟ್ಟಿದಳು. ಮಾರ್ಗವು ಬಹಳ ಕೂಡಿಕೊಂಡಿತ್ತು ಮತ್ತು ಗಾಡಿಯ ಚಕ್ರಗಳು ಮರಗಳಿಗೆ ತಾಗುತ್ತ ಮರಗಳಿಗೆ ನೋವನ್ನುಂಟುಮಾಡುತ್ತಿದ್ದವು. ತನ್ನಲ್ಲಿದ್ದ ದೋಸೆಯನ್ನು ಚಕ್ರಗಳ ನಡುವಿಗೆ ತಿಕ್ಕಿದರೆ ಸರಿಯಾಗಿ ಉರುಳಬಹುದೆಂದು ಗ್ರಹಿಸಿ ಉಜ್ಜಲು ಪ್ರಾರಂಭಿಸಲು ತನ್ನಲ್ಲಿದ್ದ ಬೆಣ್ಣೆ ಕೆಳಗೆ ಬಿದ್ದು ಉರುಳಿಹೋಯಿತು ಅದು ಎಲ್ಲಿಗೆ ಹೋಯಿತೆಂದು ಹುಡುಕಲು ಅದು ಪುನಃ ಅವಳಿಗೆ ಕಾಣಸಿಗಲಿಲ್ಲ ಅದು ಉರುಳಿ ಹೋದ ಸ್ಥಳದಲ್ಲಿ ಉರುಳಿಕೊಂಡು ಹೋಗಬಹುದೆಂದು ಗ್ರಹಿಸಿ ಮತ್ತೊಂದು ಬೆಣ್ಣೆಯ ಮುದ್ದೆಯನ್ನು ಕೆಳಗೆ ಬಿಟ್ಟಳು. ಅದೂ ಗುಡ್ಡದ ಕೆಳಗೆ ಎಲ್ಲಿಗೆ ಹೋಯಿತೆಂದು ಯಾರಿಗೂ ತಿಳಿಯದಂತೆ ಉರುಳಿಹೋಯಿತು. ಅವುಗಳು ಹೋದಲ್ಲಿ ಹೋಗಬಹುದೆಂದು ಗ್ರಹಿಸಿ ಅವುಗಳಿಗಾಗಿ ಹೆಚ್ಚು ಹೊತ್ತು ಕಾಯಲು ಅವಳಿಂದ ಸಾಧ್ಯವಾಗಲಿಲ್ಲ.

ಈಗ ಚೆನ್ನನ ಗಾಡಿಗಿಂತ ಮುಂದಕ್ಕೆ ಬಂದಳು. ಚೆನ್ನನು ತಿನ್ನಲು, "ನನಗೆ ಏನಾದರೂ ಕೊಡು," ಎಂದು ಕೇಳಿದನು. "ದೋಸೆಯನ್ನು ಚಕ್ರದ ನಡುವಿಗೆ ಸಡಿಲಿಸಲು ತಿಕ್ಕಿದೆನು. ಬೆಣ್ಣೆಯು ಬಿದ್ದು ಕೆಳಗೆ ಉರುಳಿತು, ಬರಿಯ ರೊಟ್ಟಿಯಿದೆ," ಎಂದಳು ಸುಬ್ಬಿ. "ನೀನೆಂತಹ ಬಾತುಕೋಳಿ ಹೀಗೆ ಮಾಡಲು!" ಗಂಡನೆಂದನು. "ಹಾಗೆ ಹೇಗೆ ಹೇಳುವಿರಿ? ಅದನ್ನು ನೀವು ನನಗೆ ಹೇಳಲಿಲ್ಲ?" ಎಂದಳು ಸುಬ್ಬಿ ಇಬ್ಬರೂ ರೊಟ್ಟಿಯನ್ನು ತಿಂದರು. "ನೀನು ಮನೆಯ ಬಾಗಿಲನ್ನು ಮುಚ್ಚಿರುವಿ, ಅಲ್ಲವೆ?" ಚೆನ್ನನು ಕೇಳಲು, "ಇಲ್ಲ, ನೀವು ನನಗೆ ಹಾಗೆ ಮಾಡಲು ಹೇಳಲಿಲ್ಲ," ಎಂದಳು ಸುಬ್ಬಿ. "ಹಾಗಾದರೆ ಬೇಗ ಹೋಗಿ ಮುಚ್ಚಿ ಬಾ. ಬರುವಾಗ ತಿನ್ನಲು ಏನಾದರೂ ತೆಗೆದುಕೊಂಡು ಬಾ," ಎಂದನು ಚೆನ್ನ.

ಸುಬ್ಬಿಯು ಚೆನ್ನನೆಂದಂತೆ ಮಾಡಿದಳು. ಮನೆಗೆ ಬಂದು ಕೆಲವು ಕಾಯಿಗಳನ್ನೂ ಶರಬತ್ತನ್ನೂ ತೆಗೆದುಕೊಂಡು, ಹಿಂಬದಿಯ ಬಾಗಿಲನ್ನು ಚಿಲುಕ ಸಿಕ್ಕಿಸಿ ಗಂಡನು ಬಾಗಿಲಿಗೆ ಬೀಗ ಹಾಕಿ ರಕ್ಷಿಸಲು ಹೇಳಿರುವನು; ಅದು ಅಷ್ಟು ತೃಪ್ತಿಕರವಲ್ಲ, ಎಂದು ಮುಂದಿನ ಬಾಗಿಲನ್ನು ಕಳಚಿ ಗಾಡಿಯಲ್ಲಿ ತನ್ನ ಸಮಯ ಕಳೆದು ಚೆನ್ನನ ಗಾಡಿಯ ಮುಂದೆ ಬಂದು ನಿಂತಳು. ಕಾಯಿಗಳನ್ನೂ ಶರಬತ್ತನ್ನೂ ಚೆನ್ನನಿಗೆ ಕೊಟ್ಟಳು. "ಬಾಗಿಲು ಅಲ್ಲಿದೆ, ನೀವು ಇನ್ನು ಎಷ್ಟು ಬೇಕಾದರೂ ಕಾದುಕೊಂಡಿರಬಹುದು. ಬಾಗಿಲು ಸುರಕ್ಷಿತವಾಗಿರಬಹುದು, ಎಂದಳು ಸುಬ್ಬಿ. "ಎಲಾ, ಎಲಾ, ನನ್ನ ಹೆಂಡತಿ ಎಷ್ಟು ಜಾಣೆ. ನೀನು ಬಾಗಿಲನ್ನೇ ತಂದೆ. ಇನ್ನು ಎಷ್ಟು ಜನರೂ ಮನೆಯ ಒಳಕ್ಕೆ ನುಗ್ಗಬಹುದು. ಅದನ್ನು ಪುನಃ ಹೊತ್ತುಕೊಂಡು ಹೋಗು, ಎಂದನು ಚೆನ್ನ.

"ಒಳ್ಳೆಯದು, ಕಾಯಿಗಳನ್ನೂ ಶರಬತ್ತು ಗುಪ್ಪಿಯನ್ನೂ ಒಟ್ಟಿಗೆ ತೆಗೆದುಕೊಳ್ಳಬಹುದು. ಅದು ದೊಡ್ಡ ಹೊರೆಯಾಗುವುದರಿಂದ ಬಾಗಿಲಿನ ತುದಿಗೆ ಕಟ್ಟಿಬಿಡುವೆನು, ಎಂದಳು ಸುಬ್ಬಿ.

ಅಷ್ಟರಲ್ಲಿ ಕತ್ತಲಾಯಿತು. ಅವರಿಬ್ಬರೂ ಒಂದು ಮರಕ್ಕೆ ಹತ್ತಿ ರಾತ್ರಿಯನ್ನು ಅಲ್ಲಿ ಕಳೆಯಬಹುದೆಂದು ಆಲೋಚಿಸಿದರು. ಅದೇ ದಾರಿಯಾಗಿ ವ್ಯಾಪಾರಸ್ಥ ಕಳ್ಳರು ಬಂದರು. ಅವರು ಬಹಳ ನೀಚರಾಗಿದ್ದರು. ಕಾಣೆಯಾಗುವುದಕ್ಕಿಂತ ಮೊದಲೇ ಪತ್ತೆಹಚ್ಚಲು ಸಾಧ್ಯವಿರುವ ತಂತ್ರಗಾರರಾಗಿದ್ದರು ತಮಗೆ ಬಹಳ ಆಯಾಸವಾಗಿದ್ದುದರಿಂದ ರಾತ್ರಿಯನ್ನು ಚೆನ್ನ ಮತ್ತು ಸುಬ್ಬಿಯರು ಹತ್ತಿದ ಮರದ ಬುಡದಲ್ಲಿ ಕಳೆಯುವುದೆಂದು ನಿಶ್ಚಯಿಸಿ ತಮ್ಮ ಆಹಾರವನ್ನು ಬೇಯಿಸಲು ಬೆಂಕಿಹಚ್ಚಿದರು ಚೆನ್ನನು ಮೆಲ್ಲನೆ ಕೆಳಗಿಳಿದು ಕೆಲವು ಕಲ್ಲುಗಳನ್ನು ಹೆಕ್ಕಿ ಮೇಲಕ್ಕೆ ಕೊಂಡೊಯ್ದನು. ಕಳ್ಳರ ತಲೆಗೆ ಬಿಸಾಡಲು ಪ್ರಯತ್ನಿಸಿದನು. ಆದರೆ ಕಳ್ಳರು, "ಜೋಗ್ಗಿ ಆಗಬೇಕು. ಆಗ ಸೇಬು ಹಣ್ಣುಗಳು ಉದುರುವುವು" ಎಂದುಕೊಂಡರು.

ಸುಬ್ಬಿಯು ತನ್ನ ಹೆಗಲ ಮೇಲೆ ಬಾಗಿಲನ್ನಿಟ್ಟಿರಲು ಬಹಳ ಭಾರವಾದ್ದರಿಂದ, "ಕಾಯಿಗಳನ್ನು ಕೆಳಗೆ ಎಸೆಯುವೆನು," ಎಂದಳು. "ಹಾಗಾದರೆ ತಡಮಾಡಬೇಡ, ಬೇಗನೆ ಎಸೆ, ಎಂದನು ಚೆನ್ನ. ಕಾಯಿಗಳು ಬಾಗಿಲಿಂದ ತಗಣೆಗಳೊಂದಿಗೆ ಬಿದ್ದುವು. ಆಗ ಕಳ್ಳರಲ್ಲಿ ಒಬ್ಬನು, "ಈಗ

ಬೆಳಗಾಗುತ್ತದೆ" ಎಂದನು. ಸ್ವಲ್ಪ ಸಮಯದ ನಂತರ ಸುಬ್ಬಿಯು, "ಈ ಬಾಗಿಲು ಇನ್ನೂ ಭಾರವಿದೆ. ನಾನು ಈ ಶರಬತ್ತನ್ನು ಕೆಳಗೆ ಚೆಲ್ಲುವೆನು," ಎಂದಳು. "ಬೇಡ, ನಾವಿಲ್ಲಿರುವುದು ಅವರಿಗೆ ತಿಳಿಯಬಹುದು," ಚೆನ್ನನೆಂದನು. "ಸಾಧ್ಯವಿಲ್ಲ, ತುಂಬಾ ಭಾರವಿದೆ. ಕೆಳಗೆ ಚೆಲ್ಲುವೆನು," ಎಂದು ಸುಬ್ಬಿಯು ಶರಬತ್ತನ್ನು ಕೆಳಗೆ ಚೆಲ್ಲಿದಳು. ಶರಬತ್ತು ಕಳ್ಳರ ತಲೆಗೆ ಬೀಳಲು ಒಬ್ಬನು, "ಬಹಳ ಹಿಮವು ಬೀಳುವುದು!" ಎಂದನು.

ಕಡೆಗೆ ಸುಬ್ಬಿಯು ಇಷ್ಟರ ತನಕ ಬಾಗಿಲೇ ಭಾರವಾದ್ದೆಂದು ತಿಳಿದು, "ಈ ಬಾಗಿಲು ಬಹಳ ಭಾರವಿದೆ, ಇದನ್ನು ನಾನು ಕೆಳಗೆ ಬಿಡುವೆನು," ಎಂದಳು. "ಅದು ನಮ್ಮನ್ನು ತೊಂದರೆಗುಂಟುಮಾಡುವುದು, ಕಳ್ಳರು ನಮ್ಮನ್ನು ನೋಡುವರು," ಎಂದನು ಚೆನ್ನ. "ಬಹಳ ಭಾರವಿದೆ, ಕೆಳಗೆ ಬಿಡುವೆನು," ಎಂದು ಸುಬ್ಬಿಯು ಬಾಗಿಲನ್ನು ಕೆಳಗೆ ಬಿಟ್ಟಳು. ಬಾಗಿಲು ಕೆಳಗೆ ಬೀಳುವಷ್ಟರಲ್ಲಿ ದೊಡ್ಡ ಶಬ್ದ ಕೇಳಿ ಕಳ್ಳರು, "ಕೊಲೆ" ಎಂದು ಹೇಳಿ ಅಲ್ಲಿಂದ ಓಡಿಹೋದರು. ಬಂಗಾರವನ್ನು ಅಲ್ಲೇ ಬಿಟ್ಟುಹೋಗಿದ್ದರು. ಕಡೆಗೆ ಸುಬ್ಬಿಯೇ ಸರಿಯೆನಿಸಿದಳು. ಚೆನ್ನನೂ ಸುಬ್ಬಿಯೂ ಕೆಳಗೆ ಬಂದು ನೋಡಲು ಅವರಿಗೆ ಬಂಗಾರವೆಲ್ಲಾ ಸಿಕ್ಕಿದುವು.

೧೦. ಪಿಶಾಚಿಗಳು ಮತ್ತು ಸಮಗಾರ

ಒಂದಾನೊಂದು ಸಮಯ ಒಬ್ಬ ಸಮಗಾರನು ತನ್ನ ಕೆಲಸದಿಂದ ಕಷ್ಟ ಜೀವನವನ್ನು ಸಾಗಿಸಿಕೊಂಡಿದ್ದನು. ತನ್ನ ಮನೆಯಲ್ಲಿದ್ದ ಸಾಮಾನುಗಳನ್ನೆಲ್ಲಾ ಮಾರಿದನು. ಕಡೆಗೆ ಅವನಲ್ಲಿ ಉಳಿದುದು ಒಂದು ಜೋಡು ಪಾದರಕ್ಷೆಗಳನ್ನು ಹೊಲಿಯಲಿರುವ ಚರ್ಮ ಮಾತ್ರ. ಅವನು ಅದನ್ನು ಕೊಯಿದು ಪಾದರಾಕ್ಷೆಗಳನ್ನು ಮಾಡುವ ಕೆಲಸವನ್ನು ಮರುದಿನಕ್ಕೆ ಬಿಟ್ಟು ಸ್ವರ್ಗಲೋಕದ ಹೆಸರಿನಲ್ಲಿ ತನ್ನ ಕೆಲಸವನ್ನು ನಮರ್ಪಿಸಿ ಪ್ರಾರ್ಥಿಸಿನಿದ್ದೆ ಹೋದನು. ಬೆಳಿಗ್ಗೆ ಏಳುವಷ್ಟರಲ್ಲಿ ಅತಿಯಾದ ಆಶ್ಚರ್ಯಗೊಳ್ಳುವಂತೆ ಮೇಜಿನ ಮೇಲೆ ಅತಿಸುಂದರವಾದ ಎರಡು ಪಾದರಕ್ಷೆಗಳು ತನ್ನ ಚರ್ಮದಿಂದ ಹೊಲಿಯಲ್ಪಟ್ಟುದನ್ನು ಕಂಡನು. ಅದರ ಕೆಲಸ ಬಹಳ ನಾಜೂಕಾಗಿತ್ತು. ತೂತುಗಳಲ್ಲಿ ಕ್ರಮತಪ್ಪದಂತೆ ಜಾಗ್ರತೆಯಿಂದ ಹೊಲಿಯಲಾಗಿತ್ತು.

ಆ ದಿನ ಒಬ್ಬ ಗಿರಾಕಿಯು ಬಂದು ಆ ಚಲೋದಾದ ಪಾದರಕ್ಷೆಗಳಿಗೆ ಮೊದಲಿನಂತ ಹೆಚ್ಚು ಹಣವನ್ನು ಕೊಟ್ಟನು. ಸಮಗಾರನಿಗೆ ಬಹಳ ಸಂತೋಷವಾಯಿತು ಮತ್ತು ಆ ಹಣದಿಂದ ಎರಡು ಜೋಡು ಪಾದರಕ್ಷೆಗಳಿಗೆ ಬೇಕಾಗುವಷ್ಟು ಚರ್ಮವನ್ನು ಪಡೆದುಕೊಂಡು ಅದನ್ನು ಕೊಯಿದು ರಾತ್ರಿ ದೇವರನ್ನು ಪ್ರಾರ್ಥಿಸಿ ಮಲಗಿ ನಿದ್ದೆಹೋದನು. ಮರುದಿನ ಬೆಳಿಗ್ಗೆ ನೋಡಲು ಅವುಗಳನ್ನು ನಾಜೂಕಾಗಿ ಅತಿಸುಂದರವಾಗಿ ಹೊಲಿದು ಪಾದರಕ್ಷೆಗಳನ್ನಾಗಿ ಮಾಡಲಾಗಿತ್ತು. ಸಮಗಾರನು ಅವುಗಳನ್ನು ನೋಡಿ ಆಶ್ಚರ್ಯಚಕಿತನಾದನು ಮತ್ತು ಆ ದಿನವೂ ಗಿರಾಕಿಗಳು ಬಂದು ಮತ್ತಷ್ಟು ಹೆಚ್ಚು ಹಣವನ್ನು ಕೊಟ್ಟರು. ಆ ಹಣದಿಂದ ನಾಲ್ಕು ಜೋಡು ಪಾದರಕ್ಷೆಗಳಿಗೆ ಬೇಕಾದಷ್ಟು ಚರ್ಮವನ್ನು ಕೊಂಡುಕೊಂಡನು. ಅದನ್ನು ಕೊಯಿದು ರಾತ್ರಿ ದೇವರನ್ನು ಪ್ರಾರ್ಥಿಸಿ ಮಲಗಿದನು. ಮರುದಿನ ಬೆಳಿಗ್ಗೆ ನೋಡಲು ನಾಲ್ಕು ಜೋಡು ಪಾದರಕ್ಷೆಗಳನ್ನು ಅತಿ ಅಂದವಾಗಿ ಹೊಲಿಯಲಾಗಿತ್ತು. ಹೀಗೆ ಈ ರೀತಿ ದಿನಾಲೂ ಪಾದರಕ್ಷೆಗಳನ್ನು ಮಾರಿ ಸಮಗಾರನು ಮೊದಲಿನಂತೆ ಐಶ್ವರ್ಯವಂತನಾದನು.

ಒಂದು ದಿನ ಸಂಜೆ ಒಲೆಯ ಬಳಿಯಲ್ಲಿ ಸಮಗಾರನೂ ಅವನ ಹೆಂಡತಿಯೂ ಕುಳಿತು ಒಟ್ಟಿಗೆ ಮಾತಾಡುತ್ತಾ ಇರಲು ಸಮಗಾರನು,

"ರಾತ್ರಿ ಹೊತ್ತು ಚರ್ಮವನ್ನು ಹೊಲಿದು ಪಾದರಕ್ಷೆಗಳನ್ನಾಗಿ ಮಾಡುವುದು ಯಾರೆಂದು ನೋಡಬೇಕು," ಕುತೂಹಲದಿಂದ ಹೇಳಿದನು. ಅವನ ಹೆಂಡತಿಯು ಇದನ್ನು ಕೇಳಿ ಸಂತೋಷಪಟ್ಟಳು. ಹೀಗೆ ಬೆಂಕಿಯನ್ನು ಉರಿಸಿ ರಾತ್ರಿ ಇಡೀ ಕೋಣೆಯ ಒಂದು ಮೂಲೆಯಲ್ಲಿ ಪರದೆಯ ಹಿಂದೆ ಅವಿತು ಕುಳಿತರು ಮತ್ತು ಏನೇನು ನಡೆಯುವುದೆಂದು ನೋಡುತ್ತ ಇದ್ದರು.

ಮಧ್ಯ ರಾತ್ರಿಯಾಗುತ್ತಲೇ ಎರಡು ಚಿಕ್ಕ ಉಡಿಗೆ ಧರಿಸದ ಪಿಶಾಚಿಗಳು ಬಂದು ಸಮಗಾರನ ಬೆಂಚಿನ ಕೆಳಗೆ ಕುಳಿತು ಕೊಯಿದ ಚರ್ಮಗಳನೆಲ್ಲಾ ತೆಗೆದುಕೊಂಡು ಅವುಗಳನ್ನೆಲ್ಲಾ ತಮ್ಮ ಬೆರಳುಗಳಿಂದ ಅತಿ ವೇಗವಾಗಿ ಹೊಲಿದರು ಬೆಳಗಾಗುವಷ್ಟರಲ್ಲೇ ಅವುಗಳನ್ನು ಹೊಲಿದರು ಮತ್ತು ಮಿಂಚಿನಷ್ಟು ಬೇಗನೆ ಅಲ್ಲಿಂದ ಮಾಯವಾದರು.

ಮರುದಿನ ಸಮಗಾರನ ಹೆಂಡತಿಯು ಅವರು ಅಷ್ಟು ಬೇಗನೆ ಅಲ್ಲಿ ನಿಲ್ಲದೆ ಓಡಿಹೋದುದನ್ನು ನೋಡಿ ಮತ್ತು ತಮ್ಮನ್ನು ಐಶ್ವರ್ಯವಂತರನ್ನಾಗಿ ಮಾಡಿದುದಕ್ಕೆ ಪ್ರತಿಫಲವನ್ನು ಕೊಡಬೇಕೆಂದು ತಿಳಿದು, "ನಾನು ಅವರಿಗೆ ಧರಿಸಲು ಒಂದು ಅಂಗಿ, ಒಂದು ಕೋಟು, ಒಂದು ತುಂಡು ಕೋಟು ಮತ್ತು ಒಂದು ಜೋಡು ಇಜಾರುಗಳನ್ನು ಮಾಡುವೆನು. ನೀವು ಒಂದು ಜೋಡು ಪಾದರಕ್ಷೆಗಳನ್ನು ಮಾಡಿಕೊಡಿ, ಎಂದಳು.

ಸಮಗಾರನು ಇದನ್ನು ಕೇಳಿ ಬಹಳ ಸಂತೋಷಪಟ್ಟನು ಮತ್ತು ಒಂದು ದಿನ ಸಂಜೆ ಅವುಗಳನ್ನು ಮಾಡಿ ಮೇಜಿನ ಮೇಲಿಟ್ಟು ಬೆಂಕಿ ಉರಿಸಿ ಕೋಣೆಯ ಮೂಲೆಯಲ್ಲಿ ಪರದೆಯ ಹಿಂದೆ ಅವಿತು ಏನೆಲ್ಲಾ ನಡೆಯುವುದೆಂದು ನೋಡಲು ಕುಳಿತರು. ಆ ದಿನವೂ ರಾತ್ರಿ ಪಿಶಾಚಿಗಳು ಬಂದು ನೋಡಲು ತಮಗಾಗಿ ಇರಿಸಿದ ಉಡಿಗೆತೊಡಿಗೆಗಳನ್ನು ನೋಡಿ ಅವುಗಳನ ಧರಿಸಿ ನರ್ತಿಸಲು ಪ್ರಾರಂಭಿಸಿದರು. ತಮ್ಮ ಮನಸ್ಸಿಗೆ ಸಂತೋಷವಾಗುವಷ್ಟು ನರ್ತಿಸಿ ಕಡೆಗೆ ಬಾಗಿಲಿನ ಮೂಲಕ ಹೊರಗೆ ಹಾರಿ ಗಗನಗಳಲ್ಲಿ ಮಾಯವಾದರು. ಸಮಗಾರನು ಆನಂತರ ಅವರನ್ನು ನೋಡಿದಾದನು ಮತ್ತು ತಮ್ಮ ಮುಂದಿನ ದಿನಗಳು ಅವನ ಜೀವಂತದ ತನಕ ಮೊದಲಿನಂತೆ ಸಂತೋಷದಿಂದ ಕಳೆದುವು.

ಪ್ರಚಾರಕ್ಕಾಗಿ